# ಯುಗದ ಸಮಾಪ್ತಿ: ಮತ್ತಾಯ 24 ಮತ್ತು ಸಂಬಂಧಿತ ವಾಕ್ಯಭಾಗಗಳು

ಕೆಲವು ವ್ಯಾಖ್ಯಾನಕಾರರು ಮತ್ತಾಯ 24ನೇ ಅಧ್ಯಾಯವನ್ನು ಪ್ರಕಟನೆ ಪುಸ್ತಕದ ಸಮವಾದ ಸ್ಥಾನದಲ್ಲಿಡುತ್ತಾರೆ ಮತ್ತು ಪ್ರಕಟನೆ ಪುಸ್ತಕದಂತೆಯೇ, ಮತ್ತಾಯ 24ನೇ ಅಧ್ಯಾಯವು ಯುದ್ಧಗಳನ್ನು, ಕ್ಷಾಮಗಳು, ಭೂಕಂಪಗಳು, ಮತ್ತು ಕ್ರೈಸ್ತರಿಗಾಗುವ ಹಿಂಸೆಯ ಕುರಿತಾಗಿ ಉಲ್ಲೇಖಿಸುತ್ತದೆ ಎಂದು ಗಮನಕ್ಕೆ ತರುತ್ತಾರೆ (ಮತ್ತಾಯ 24:6, 7, 9; ಪ್ರಕಟನೆ 2:10; 6:8; 9:15; 11:7, 13; 18:8). ಮತ್ತಾಯ 24 ಮತ್ತು ಪ್ರಕಟನೆ ಪುಸ್ತಕದ ಉದ್ದೇಶವು ಕ್ರಿಸ್ತನ ಎರಡನೆಯ ಬರೋಣವು ಸಮೀಪವಾಗಿದೆ ಎಂಬುದನ್ನು ನಮಗೆ ತಿಳಿಸುವಂಥ "ಕಾಲಗಳ ಸೂಚನೆಗಳನ್ನು" ಪ್ರಕಟಗೊಳಿಸುವದಾಗಿರುತ್ತದೆಂಬ ಸುಳ್ಳು ಪೀಠಿಕೆಯಾಗಿ ಆರಂಭಿಸುವ ಹೊರತು ಈ ಅಭ್ಯಾಸವು ಸಾಕಷ್ಟು ಮುಗ್ಧವಾಗಿರುತ್ತದೆ.

ಈ ಪೂರಕ ಅಧ್ಯಯನದ ಗುರಿಯು ಮತ್ತಾಯ 24ನೇ ಅಧ್ಯಾಯವನ್ನು, ಸಮಾನಾರ್ಥ ವಾಕ್ಯಭಾಗಗಳಾದ ಮಾರ್ಕ 13 ಹಾಗೂ ಲೂಕ 21 ಅಧ್ಯಾಯಗಳ ಜೊತೆಯಲ್ಲಿ ಅವಲೋಕಿಸುವದು, ಅವುಗಳು ಏನನ್ನು ಕಲಿಸುತ್ತವೆ ಹಾಗೂ ಕಲಿಸುವದಿಲ್ಲ ಎಂಬುದನ್ನು ನಿರ್ಧರಿಸುವ ಪ್ರಯತ್ನವನ್ನು ಮಾಡುವದೇ ಆಗಿದೆ. ಬಹುಪಾಲು ಲೇಖಕರು ಮತ್ತಾಯ 24ನೇ ಅಧ್ಯಾಯವು ಕಠಿಣವಾದ ಅಧ್ಯಾಯವೆಂಬುದನ್ನು ಒಪ್ಪಿಕೊಳ್ಳುತ್ತಾರೆ; ಬಹುಶಃ ಇದು ಬೈಬಲಿನಲ್ಲಿರುವ ಅಧ್ಯಾಯಗಳಲ್ಲಿಯೇ ಅತ್ಯಂಥ ಕಠಿಣ ಅಧ್ಯಾಯವಾಗಿದೆ. ಹಾಗಿದ್ದರೂ, ನಾನು ಗ್ರಹಿಸಿಕೊಳ್ಳಬಹುದಾದ ಮೂಲಭೂತ ಸತ್ಯಗಳಿಲ್ಲವಾಗಿದ್ದಲ್ಲಿ ದೇವರು ಈ ವಾಕ್ಯಭಾಗವನ್ನು ನಮಗಾಗಿ ಸಂರಕ್ಷಿಸಿ ಇಡುತ್ತಿರಲಿಲ್ಲ. ಈ ಅಧ್ಯಯನದಲ್ಲಿ, ದೇವಾಲಯದ ನಾಶನದ ಕುರಿತಾಗಿ ಕರ್ತನು ನೀಡಿದ ಬೆಚ್ಚಿಬೀಳಿಸುವ ಪ್ರಕಟನೆ, ಶಿಷ್ಯರ ಪ್ರಶ್ನೆಗಳು, ಮತ್ತು ಅಂತಿಮವಾಗಿ ಯೇಸು ನೀಡಿದ ಸುದೀರ್ಘವಾದ ಪ್ರತ್ಯುತ್ತರ ಇವುಗಳನ್ನು ಪರೀಕ್ಷಿಸಲಿದ್ದೇವೆ.

## ದೇವಾಲಯದಿಂದ ನಿರ್ಗಮನ (ಮತ್ತಾಯ 24:1-14; ಮಾರ್ಕ 13:1-15; ಲೂಕ 21:5-19)

### ಒಂದು ಬೆಚ್ಚಿಬೀಳಿಸುವ ಪ್ರಕಟನೆ (ಮತ್ತಾಯ 24:1-3; ಮಾರ್ಕ 13:1-4; ಲೂಕ 21:5-7)

"ಮೇಲಕ್ಕೆ ಎತ್ತಲ್ಪಡಬೇಕು" ಎಂಬುದರ ಕುರಿತಾಗಿ ಯೇಸುವಿನ ಪ್ರವಚನದ ಬಳಿಕ,

ಆತನು "ಅವರನ್ನು ಬಿಟ್ಟ ಹೋದನು" (ಯೋಹಾನ 12:36), "ದೇವಾಲಯವನ್ನು ಬಿಟ್ಟು ಹೋಗುತ್ತಿರಲು" (ಮಾರ್ಕ 13:1; ನೋಡಿರಿ ಮತ್ತಾಯ 24:1). ಕ್ರಿಸ್ತನು ದೇವಾಲಯದಿಂದ ನಿರ್ಗಮಿಸುವದು ಮಹತ್ವಪೂರ್ಣವಾಗಿತ್ತು. ದೇವರ ಮಹಿಮೆಯು, ಅಂದರೆ ಯೇಸುವು (ನೋಡಿರಿ ಯೋಹಾನ 2:11; 8:54), ದೇವಾಲಯವನ್ನು ಬಿಟ್ಟು ಹೋಗಿ ಇನ್ನೆಂದಿಗೂ ಹಿಂದಿರುಗಲಿಲ್ಲ. (ದೇವರ ಮಹಿಮೆಯು ನಿರ್ಗಮಿಸುವ ವಿಷಯದಲ್ಲಿ, ಅದನ್ನು 1 ಸಮುವೇಲ 4:21, 22ರೊಂದಿಗೆ ಹೋಲಿಕೆ ಮಾಡಿರಿ.) ದೇವಾಲಯವು ನಾಶವಾಗುವದಕ್ಕೆ ಹಲವಾರು ದಶಕಗಳಾಗಿದ್ದವಾದರೂ, ಅದರ ಗತಿಯು ನಿರ್ಧರಿಸಲ್ಪಟ್ಟಿತ್ತು (ನೋಡಿರಿ ಮತ್ತಾಯ 23:37, 38).

ಕ್ರಿಸ್ತನು ದೇವಾಲಯದ ಸಮುಚ್ಚಯವನ್ನು ಬಿಟ್ಟು ಹೋಗುತ್ತಿರುವ ವೇಳೆ, ಆತನ ಶಿಷ್ಯರು - ಅವರು ಪಟ್ಟಣದ ಹೊರಗಡೆಯಿಂದ ಬಂದ ಪ್ರವಾಸಿಗಳೆಂಬಂತೆ - ಸ್ವಲ್ಪ ನಿಂತು ದೇವಾಲಯ ಹಾಗೂ ಅದರ ಸುತ್ತಲಿನ ಕಟ್ಟಡಗಳ ಸೌಂದರ್ಯವನ್ನು ಕುರಿತು ಟಿಪ್ಪಣಿ ಮಾಡಿದರು. "ಆತನ ಶಿಷ್ಯರಲ್ಲಿ ಒಬ್ಬನು ಆತನಿಗೆ - ಗುರುವೇ, ನೋಡು, ಎಂಥಾ ಕಲ್ಲುಗಳು! ಎಂಥಾ ಕಟ್ಟಡಗಳು! ಎಂದು ಹೇಳಿದನು" (ಮಾರ್ಕ 13:1). ಇನ್ನು ಕೆಲವರು "ದೇವಾಲಯದ ವಿಷಯದಲ್ಲಿ ಅದು ಅಂದವಾದ ಕಲ್ಲುಗಳಿಂದಲೂ ಹರಕೆಯ ಒಡವೆಗಳಿಂದಲೂ ಅಲಂಕಾರವಾಗಿದೆ" ನೋಡು ಎಂದು ಹೇಳಿದರು (ಲೂಕ 21:5). "ಹರಕೆಯ" ಎಂಬುದು ಲ್ಯಾಟಿನ್ ಭಾಷೆಯ "vow" ಎಂಬುದರಿಂದ ಬರುತ್ತದೆ. "ಹರಕೆಯ ಒಡವೆಗಳು" ಎಂಬುದು ಒಂದು ಹರಕೆಯು ನೆರವೇರಿದ್ದಕ್ಕಾಗಿ ಕೊಡಲ್ಪಟ್ಟಿರುವ ಉಡುಗೋರೆಗಳನ್ನು ಸೂಚಿಸುತ್ತದೆ. NIVಯಲ್ಲಿ "ದೇವರಿಗೆ ಸಮರ್ಪಿತವಾದ ಕಾಣಿಕೆಗಳು" ಎಂದಿರುತ್ತದೆ.

ದೇವಾಲಯದ ಸಮುಚ್ಚಯವು ಒಂದು ಅಮೋಘವಾದ ಕಟ್ಟಡವಾಗಿತ್ತು, ಮತ್ತು ಯೆಹೂದ್ಯರಂತೂ ಅದರ ಬಗ್ಗೆ ಬಹು ಹೆಮ್ಮೆ ಪಟ್ಟುಕೊಳ್ಳುತ್ತಿದ್ದರು. ಅದು ಅಥೇನೆಯಲ್ಲಿದ್ದ ನಗರದುರ್ಗಕ್ಕಿಂತ ಎರಡು ಪಟ್ಟು ದೊಡ್ಡದಾಗಿತ್ತು. ಅದು ಬಿಳೀ ಸುಣ್ಣಕಲ್ಲುಗಳಿಂದ ಮತ್ತು ಅಮೃತಶಿಲೆಗಳಿಂದ ನಿರ್ಮಿಸಲ್ಪಟ್ಟಿತ್ತು ಮತ್ತು, ದೂರದಿಂದ ನೋಡಿದಾಗ ಒಂದು ಹಿಮಾವೃತಗೊಂಡಿರುವ ಬೆಟ್ಟದಂತೆ ಕಾಣಿಸುತ್ತಿತ್ತು. ಮಹಾ ಹೆರೋದನು ದೇವಾಲಯದ ಸಮುಚ್ಚಯವನ್ನು ಕ್ರಿ.ಪೂ. 20ರಲ್ಲಿ ಕಟ್ಟುವದಕ್ಕೆ ಆರಂಭಿಸಿದ್ದನು, ಮತ್ತು ಯೇಸು ಅಲ್ಲಿಗೆ ಭೇಟಿ ಕೊಟ್ಟ ವೇಳೆಯಲ್ಲಿ ಅದು ಇನ್ನೂ ನಿರ್ಮಾಣದಲ್ಲಿಯೇ ಇತ್ತು (ನೋಡಿರಿ ಯೋಹಾನ 2:20). ಬಹುಶಃ ಯೆರೂಸಲೇಮಿಗೆ ಒಬ್ಬ ಯಾತ್ರಿಯು ಬರುವಾಗಲೆಲ್ಲಾ, ಯಾವದಾದರೂ ಹೊಸ ಹಾಗೂ ಅತ್ಯದ್ಭುತವಾದ ಸೇರ್ಪಡೆ ಮಾಡಲ್ಪಟ್ಟಿರುತ್ತಿತ್ತು. Josephusನು ಸ್ವತಃ ಪವಿತ್ರಾಲಯವು ಅಲಂಕರಿಸಲ್ಪಟ್ಟಿದ್ದ "ಹರಕೆಯ ಒಡವೆಗಳ" ಕುರಿತಾಗಿ ಬರೆದನು: ಕಸೂತಿ ಮಾಡಲ್ಪಟ್ಟಿದ್ದ ತೆರೆಗಳು, ಅನಾಗರೀಕ ಜನಾಂಗಗಳಿಂದ ಕೊಳ್ಳೆಯಾಗಿ ತರಲಾಗಿದ್ದ ವಸ್ತುಗಳು, ಮತ್ತು ದ್ರಾಕ್ಷೆಯ ವ್ಯಾಪಕವಾದ ಗೊಂಚಲುಗಳಿಂದ ಕೂಡಿದ್ದೊಂದು ಚಿನ್ನದ ದ್ರಾಕ್ಷೇಬಳ್ಳಿ.[1] ಶಿಷ್ಯರು ತಾವು ನೋಡಿದ ಸಂಗತಿಗಳಿಂದ ಹೇಗೆ ಅಷ್ಟೊಂದು ಮನಸೆಳೆಯಲ್ಪಟ್ಟರೆಂಬುದರಲ್ಲಿ ಆಶ್ಚರ್ಯವೇನಿಲ್ಲ.

ಹೇಗೂ, ಅವರಲ್ಲಿ ಹುರುಪಿಗೆ ಯೇಸುವಿನ ಪ್ರತ್ಯುತ್ತರವು ತಣ್ಣೀರನ್ನೆರಚಿತ್ತು: "ನೀವು ಇವುಗಳನ್ನು ನೋಡುತ್ತೀರಲ್ಲಾ, ಇಲ್ಲಿ ಕಲ್ಲಿನ ಮೇಲೆ ಕಲ್ಲು ಉಳಿಯದೆ ಎಲ್ಲಾ ಕೆಡವಲ್ಪಡುವ ದಿವಸಗಳು ಬರುವವು ಅಂದನು" (ಲೂಕ 21:6). ಕ್ರಿಸ್ತನು ಈ ಮುಂಚೆ ಯೆರೂಸಲೇಮ್ ಹಾಗೂ ದೇವಾಲಯದ ನಾಶನದ ಕುರಿತಾಗಿ ಮಾತಾಡಿದ್ದನು (ಮತ್ತಾಯ 22:7; 23:38; ಲೂಕ 13:35), ಆದರೆ ಆ ಉಲ್ಲೇಖಗಳು ಅನೇಕ ಸಾರಿ ಮುಸುಕು ಹಾಕಿದ ಪದಗಳಿಂದ ಕೂಡಿದ್ದವು. ಹೇಗೂ,

ಈ ಸಂದರ್ಭದಲ್ಲಿ, ಆತನ ಮಾತುಗಳನ್ನು ಅಪಾರ್ಥಮಾಡಿಕೊಳ್ಳುವದು ಕಷ್ಟಕರವಾಗಿರುತ್ತಿತ್ತು.

ಕರ್ತನು ಹೀಗೆ ಹೇಳಿದನು, "ಇಲ್ಲಿ ಕಲ್ಲಿನ ಮೇಲೆ ಕಲ್ಲು ಉಳಿಯುವದಿಲ್ಲ; ಎಲ್ಲಾ ಕೆಡವಲ್ಪಡುವದು" (ಮಾರ್ಕ 13:2; ನೋಡಿರಿ ಲೂಕ 19:44). Josephusನು ಬರೆದ ಪ್ರಕಾರ ಕೆಲವು ಕಲ್ಲುಗಳು ಮೂವತ್ತೆಂಟು ಅಡಿಗಳಷ್ಟು ಉದ್ದ, ಹನ್ನೆರಡು ಅಡಿಗಳಷ್ಟು ಎತ್ತರ, ಮತ್ತು ಹದಿನೆಂಟು ಅಡಿಗಳಷ್ಟು ಅಗಲವಾಗಿದ್ದವು.[2] ಅಪೊಸ್ತಲರು ಆ ಅಖಂಡಶಿಲೆಗಳನ್ನು ಕಂಡು, "ಈ ಕಲ್ಲುಗಳಲ್ಲಿ ಯಾವದೂ ಒಂದರ ಮೇಲೊಂದು ಬಿಡಲ್ಪಡುವದಿಲ್ಲವೋ? ಅದು ಹೇಗೆ ಸಾಧ್ಯವಾಗಬಹುದು?" ಎಂದು ಚಕಿತಗೊಂಡಿರುವ ಸಾಧ್ಯತೆಯಿದೆ. ಧರ್ಮ ಹಾಗೂ ಇಸ್ರಾಯೇಲಿನ ಮಹಿಮೆಗೆ ಸಂಬಂಧಿಸಿದ ಯೆಹೂದಿ ಭಾವನೆಗಳಲ್ಲಿ ದೇವಾಲಯವು ಕೇಂದ್ರಬಿಂದುವಾಗಿತ್ತು. ಅದು ನಾಶವಾಗುತ್ತದೆಂಬ ಬಗ್ಗೆ ಯೋಚಿಸುವದು ಅಸಾಧ್ಯ ಮಾತಾಗಿತ್ತು.

ಯೇಸು ಹಾಗೂ ಆತನ ಹಿಂಬಾಲಕರು ದೇವಾಲಯವನ್ನು ಬಿಟ್ಟು ಹೋದರು, ಕಿದ್ರೋನ್ ಹಳ್ಳವನ್ನು ದಾಟಿ ದೇವಾಲಯಕ್ಕೆ ಪೂರ್ವ ದಿಕ್ಕಿನಲ್ಲಿದ್ದ ಎಣ್ಣೇಮರಗಳ ತೋಪು ಎಂದು ಕರೆಸಿಕೊಳ್ಳುವ ಗುಡ್ಡದ ಮೇಲೆ ಏರಿ ಕೂತುಕೊಂಡರು - ಬಹುಶಃ ಅವರು ತಮ್ಮ ಕೆಲವೊಂದು ರಾತ್ರಿಗಳನ್ನು ಕಳೆದಿದ್ದಂಥ ಸ್ಥಳವಾಗಿರಬಹುದು (ಲೂಕ 21:37). ಅವರು ಇಳಿಜಾರಿನಲ್ಲಿ ಕೂತಿರುವ ವೇಳೆ, ದೇವಾಲಯ ಹಾಗೂ ಪಟ್ಟಣವು "ಅವರ ಕಣ್ಣುಗಳ ಮುಂದೆ ಸ್ಪಷ್ಟವಾಗಿ ಗೋಚರಿಸುತ್ತಿತ್ತು, ಇಳಿದು ಹೋಗುತ್ತಿದ್ದ ಸೂರ್ಯನ ಉದ್ದವಾದ ನೆರಳುಗಳಿಂದ ಆವರಿಸಲ್ಪಟ್ಟಿದ್ದಾಗಿ ಇತ್ತು"[3] (ನೋಡಿರಿ ಮತ್ತಾಯ 24:3). ಅವರು ಕೆಳಗಿದ್ದ ದೇವಾಲಯದ ಸಮುಚ್ಛಯವನ್ನು ನೋಡುತ್ತಿರುವ ವೇಳೆ (ಮಾರ್ಕ 13:3), ಶಿಷ್ಯರ ಹೃದಯಗಳಲ್ಲಿ ಉರಿಯುತ್ತಲಿದ್ದ ಪ್ರಶ್ನೆಯು ಉರುಳುತ್ತಾ ಹೊರಗೆ ಬಂದಿತ್ತು. ಅವರು ಯೇಸುವನ್ನು ಹೀಗೆ ಕೇಳಿದರು, "ಅದು ಯಾವಾಗ ಆಗುವದು? ನೀನು ಪ್ರತ್ಯಕ್ಷನಾಗುವದಕ್ಕೂ ಯುಗದ ಸಮಾಪ್ತಿಗೂ ಸೂಚನೆಯೇನು? ನಮಗೆ ಹೇಳು" (ಮತ್ತಾಯ 24:3; ನೋಡಿರಿ ಮಾರ್ಕ 13:3, 4; ಲೂಕ 21:7).

ಶಿಷ್ಯರು ತಾವು ಒಂದೇ ಘಟನೆಯ ಕುರಿತಾಗಿ - ದೇವಾಲಯದ ನಾಶನ - ಕೇಳುತ್ತಿದ್ದೇವೆಂದು ಭಾವಿಸಿದ್ದರು ಆದರೆ ಅವರು ವಾಸ್ತವಿಕದಲ್ಲಿ ಹಲವಾರು ಸಂಗತಿಗಳ ವಿಷಯವಾಗಿ ಕೇಳುತ್ತಿದ್ದರು. ದೇವಾಲಯದ ನಾಶನವನ್ನು ಹೊರತು ಪಡಿಸಿ, ಅವರು ಕ್ರಿಸ್ತನ "ಬರೋಣ" ಮತ್ತು "ಯುಗದ ಸಮಾಪ್ತಿ" ಕುರಿತು ಸಹ ಕೇಳಿದರು. KJVಯಲ್ಲಿ "ಲೋಕದ ಅಂತ್ಯ" ಎಂದಿರುತ್ತದೆ, ಆದರೆ ಬಹಳಷ್ಟು ಅನುವಾದಕರು "ಯುಗ" ಎಂಬುದು ಒಂದು ಉತ್ತಮವಾದ ಅನುವಾದ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. NKJVಯಲ್ಲಿ "ಯುಗ" ಎಂದು ಇರುತ್ತದೆ.

"ಬರೋಣ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು παρουσία (*parousia*). ಸುವಾರ್ತೆಯ ಬರವಣಿಗೆಗಳಲ್ಲಿ ಈ ಪದವು ಕಾಣಿಸಿಕೊಂಡಿರುವ ಏಕೈಕ ಸ್ಥಳವು ಮತ್ತಾಯ 24 (ವಚನಗಳು 3, 27, 37, 39). ಅದು ಪತ್ರಿಕೆಗಳಲ್ಲಿ ಹಲವಾರು ಸಾರಿ ಕಾಣಿಸಿಕೊಳ್ಳುತ್ತದೆ, ಅಲ್ಲಿ ಅದು ಸಾಮಾನ್ಯವಾಗಿ ಕ್ರಿಸ್ತನ ಎರಡನೆಯ ಬರೋಣವನ್ನು ಸೂಚಿಸುತ್ತದೆ (ನೋಡಿರಿ 1 ಕೊರಿಂಥ 15:23; 1 ಥೆಸಲೋನಿಕ 2:19; 3:13; 4:15; ಯಾಕೋಬ 5:7, 8).

*Parousia* ಎಂಬುದು "ಗ್ರೀಕ್ ಭಾಷೆಯಲ್ಲಿ ಒಬ್ಬಅರಸನ ಬರೋಣವನ್ನು ಸೂಚಿಸಲು ಬಳಸುವ ತಾಂತ್ರಿಕ ಪದವಾಗಿರುತ್ತದೆ."[4] ಶಿಷ್ಯರು ಈ ಪದವನ್ನು ಬಳಸಿದಾಗ, ಅವರು ಮನಸ್ಸಿನಲ್ಲಿ ಬಹುಶಃ ದೇವರು ತನ್ನ ರಾಜ್ಯವನ್ನು ಸ್ಥಾಪಿಸುವನೆಂಬುದು ಇತ್ತು, ಅದನ್ನು ಅವರು

ಒಂದು ಶಾರೀರಿಕ ರಾಜ್ಯವೆಂದು ತಪ್ಪಾಗಿ ಭಾವಿಸಿಕೊಂಡಿದ್ದರು. ಯೇಸುವು ಈ ಮುಂಚೆ ತನ್ನ ಎರಡನೆಯ ಬರೋಣದ ಕುರಿತು ಮುಂತಿಳಿಸಿದ್ದನು (ನೋಡಿರಿ ಮತ್ತಾಯ 16:27; ಲೂಕ 12:40). ಹೇಗೂ, ಆತನು ಮರಣಿಸುವದು ಮತ್ತು ಜೀವಿತನಾಗಿ ಎದ್ದೇಳುವದು ಅಗತ್ಯವೆಂಬುದನ್ನು ಶಿಷ್ಯರು ಗ್ರಹಿಸಿಕೊಳ್ಳಲಿಲ್ಲವಾಗಿದ್ದರೆ, ಕರ್ತನು ತನ್ನ ಎರಡನೆಯ ಬರೋಣದ ಕುರಿತು ಹೇಳಿದಾಗ ಆತನ ತಾತ್ಪರ್ಯವು ಏನಾಗಿತ್ತದೆಂಬುದನ್ನು ಅವರು ಅರ್ಥಮಾಡಿಕೊಂಡಿರುವದು ಅಸಾಧ್ಯವಾಗಿತ್ತೆಂದು ತೋರುತ್ತದೆ.

ಶಿಷ್ಯರು ರಾಜ್ಯದ ಸ್ಥಾಪನೆಯನ್ನು ಸೂಚಿಸಿ ಹೇಳಿದರೆಂದು ಭಾವಿಸಿಕೊಳ್ಳುವದಾದರೆ, “ಯುಗದ ಸಮಾಪ್ತಿ” ಎಂಬುದು (ಅವರ ಮನಸ್ಸುಗಳಲ್ಲಿ) ಪ್ರಸ್ತುತವಿದ್ದ ರಾಜಕೀಯ ವ್ಯವಸ್ಥೆಯ ಸಮಾಪ್ತಿ ಎಂದಾಗಿತ್ತು - ಅಂದರೆ ದ್ವೇಷಕ್ಕೆ ಗುರಿಯಾಗಿದ್ದ ರೋಮನ್ನರ ಆಳ್ವಿಕೆಯ ಅಂತ್ಯ. ಶಿಷ್ಯರಿಗೆ ಮೆಸ್ಸೀಯನ ರಾಜ್ಯವು - ಅಂದರೆ, ಅವರು ಊಹಿಸಿಕೊಂಡಿದ್ದಂಥ ರಾಜ್ಯ - ಆರಂಭವಾಗುವ ಘಟನೆಯೇ ಹೊರತು ಬೇರೆ ಯಾವದೇ ದೇವಾಲಯವನ್ನು ನಾಶಗೊಳಿಸುವಷ್ಟು ಸಾಕಾದ ವಿಪತ್ತಿನ ಬಗ್ಗೆ ಕಲ್ಪನೆಯನ್ನು ಮಾಡಿಕೊಳ್ಳುವದು ಅಸಾಧ್ಯವಾಗಿದ್ದರಿಂದ ಅವರು ಬಹುಶಃ ಈ ಪ್ರಶ್ನೆಗಳನ್ನೆಲ್ಲಾ ಗುಂಪು ಕೂಡಿಸಿ ಕೇಳಿದರು. ನಾವು ಯೇಸುವಿನ ಪ್ರತ್ಯುತ್ತರದ ಬಗ್ಗೆ ಅಧ್ಯಯನ ಮಾಡುವ ವೇಳೆ, ಆತನ ಉತ್ತರವು ದೇವಾಲಯದ ನಾಶನಕ್ಕಿಂತಲೂ ಅಧಿಕವಾದದ್ದನ್ನು ಒಳಗೊಂಡಿರುತ್ತದೆಂಬುದನ್ನು ನಾವು ಗ್ರಹಿಸಿಕೊಳ್ಳುವ ಅಗತ್ಯವಿದೆ.

## ಗಂಭೀರವಾದ ವಿವಾದ

ಕ್ರಿಸ್ತನು ಶಿಷ್ಯರಿಗೆ ನೀಡಿದ ಉತ್ತರವು ದಾಖಲಿಸಲ್ಪಟ್ಟಿರುವ ಆತನ ಪ್ರವಚನಗಳಲ್ಲಿಯೇ ಅತ್ಯಂಥ ಸುದೀರ್ಘವಾದದ್ದಾಗಿದೆ - ಮತ್ತು ಬಹುಶಃ ಆತನ ಅತ್ಯಂಥ ವಿವಾದಾತ್ಮಕ ಪ್ರವಚನವಾಗಿರುತ್ತದೆ: ಮತ್ತಾಯ 24:4-25:46 (ನೋಡಿರಿ ಮಾರ್ಕ 13:5-37; ಲೂಕ 21:8-36). ಮತ್ತಾಯ 24ನೇ ಅಧ್ಯಾಯವು ಯೇಸುವಿನ ಎರಡನೆಯ ಬರೋಣದ “ಸೂಚನೆಗಳನ್ನು” ಕಂಡುಹಿಡಿಯುವದಕ್ಕೆ ಅನೇಕ ಸಹಸ್ರವರ್ಷಪೂರ್ವ ವಾದಿಗಳಿಂದ ಬಳಸಲ್ಪಟ್ಟಿರುತ್ತದೆ. ಅವರು ಈಗಿನ ಬರಗಾಲಗಳನ್ನು ಮತ್ತು ಯುದ್ಧಗಳನ್ನು ತೋರಿಸುವವರಾಗಿ ಕರ್ತನ ಬರೋಣವು ಸನ್ನಿಹಿತವಾಗಿದೆ ಎಂದು ಹೇಳುವದರಲ್ಲಿ ಆನಂದಪಡುತ್ತಾರೆ - ತಾನು ಯಾವಾಗ ಬರುವನೆಂಬುದು ಯಾರೊಬ್ಬರಿಗೂ ತಿಳಿಯುವದಿಲ್ಲ ಎಂಬುದಾಗಿ ಯೇಸುವು ಹೇಳಿರುವಾಗಲೂ ಅವರು ಈ ಕೆಲಸವನ್ನು ಮಾಡುತ್ತಾರೆ (ಮತ್ತಾಯ 24:36).

ಮತ್ತಾಯ 24ನೇ ಅಧ್ಯಾಯವನ್ನು ಇನ್ನು ಕೆಲವರು ಸಹ ತಮ್ಮ ತಮ್ಮ ತತ್ವಗಳನ್ನು ಗಟ್ಟಿಪಡಿಸಿಕೊಳ್ಳುವದಕ್ಕೆ ಸಹ ಬಳಸಿಕೊಳ್ಳುತ್ತಾರೆ. ಉದಾಹರಣೆಗೆ, ಯೆರೂಸಲೇಮ್ ನಾಶಗೊಳಿಸಲ್ಪಟ್ಟ ಕ್ರಿ.ಶ. 70ರಲ್ಲಿ ಕರ್ತನ ಬರೋಣವು ಸಂಭವಿಸಿತು ಎಂಬುದಾಗಿ ನಂಬುವವರಿಂದ ಅದು ಬಳಸಿಕೊಳ್ಳಲ್ಪಡುತ್ತದೆ. ಈ ಸಿದ್ಧಾಂತವು ಸಭೆಯನ್ನು ಹಲವಾರು ಖಂಡಗಳಲ್ಲಿ ವಿಭಾಗಿಸಿರುತ್ತದೆ.

ನಾವು ಮತ್ತಾಯ 24ನೇ ಅಧ್ಯಾಯದ ಕುರಿತು ನಮ್ಮ ಅಧ್ಯಯನದ ಸಮೀಪಕ್ಕೆ ಬರುವ ವೇಳೆ, ನಾವು ಅನುಸರಿಸುವ ಅರ್ಥೈಸುವ ದಾರಿಯು ಏನೇ ಆಗಿದ್ದರೂ ಸರಿಯೇ, ಅಂತಹ ವಾಕ್ಯಭಾಗಗಳು ಕಷ್ಟಕರವಾಗಿರುತ್ತವೆಂಬುದನ್ನು ನಾವು ಒಪ್ಪಿಕೊಳ್ಳಲೇ ಬೇಕಾಗಿರುತ್ತದೆ. ಇದಕ್ಕೆ ಒಂದು ಕಾರಣವು ಏನೆಂದರೆ ಯೇಸುವು “ಸಾಮಾನ್ಯವಾಗಿದ್ದ ಯೆಹೂದಿ ಅಂತ್ಯಕಾಲಿಕ ಸಾದೃಶ್ಯವನ್ನು ಬಳಕೆ ಮಾಡಿದನು.”[5] ಅಂತ್ಯಕಾಲಿಕ ಸಾಹಿತ್ಯವು ತನ್ನ ಸಂದೇಶವನ್ನು ತಿಳಿಸುವದಕ್ಕೆ ಸುಸ್ಪಷ್ಟವಾದ, ಕೆಲವು ಸಾರಿ ವಿಚಿತ್ರವಾದ ಸಾಂಕೇತಿಕತೆಯನ್ನು ಬಳಸುತ್ತದೆ.

ಯೆಹೂದ್ಯರಿಗೆ ಅಂತ್ಯಕಾಲಿಕ ಭಾಷೆಯ ಪರಿಚಯವಿತ್ತು. ದಾನಿಯೇಲನ ಪುಸ್ತಕದಂತಹ ಪ್ರೇರಿತ ಪುಸ್ತಕಗಳಲ್ಲಿ ಅಂತ್ಯಕಾಲಿಕ ಸಾಂಕೇತಿಕತೆಯು ಬಳಸಲ್ಪಟ್ಟಿರುವದರ ಜೊತೆಗೆ, ಹಳೆಯ ಒಡಂಬಡಿಕೆಯ ಅಂತ್ಯದ ಹಾಗೂ ಯೇಸುವಿನ ಜನನದ ನಡುವಿನ ಶತಮಾನಗಳಲ್ಲಿ ಪ್ರೇರಿತವಲ್ಲದ ಅಂತ್ಯಕಾಲಿಕ ಪ್ರಬಂಧಗಳು ಹೇರಳವಾಗಿದ್ದವು. ಇಂದು ನಮ್ಮಲ್ಲಿ ಬಹಳಷ್ಟು ಮಂದಿ ಈ ಚಿತ್ರಣದ ಬಗ್ಗೆ ಪರಿಚಯವಿಲ್ಲದವರಾಗಿ ಇರುವ ಕಾರಣದಿಂದ, ಅನೇಕ ಸಾರಿ ಅಂತ್ಯಕಾಲಿಕ ಸಾಹಿತ್ಯದ ಅರ್ಥವನ್ನು ಅರಿಯುವದು ಕಷ್ಟಕರವಾಗಿರುತ್ತದೆ.

ಈ ಕಠಿಣತೆಗೆ ಇನ್ನೊಂದು ಕಾರಣವೆಂದರೆ, ಈಗಾಗಲೇ ಗಮನಿಸಿರುವ ಪ್ರಕಾರ, ಕರ್ತನು ಒಂದು ಪ್ರಶ್ನೆಗೆ ಅಲ್ಲ, ಆದರೆ ಹಲವಾರು ಪ್ರಶ್ನೆಗಳಿಗೆ ಉತ್ತರಿಸಿದನು ಎಂಬುದೆ: ಯೆರೂಸಲೇಮಿನ ನಾಶನದ ಕುರಿತಾದ ಪ್ರಶ್ನೆ ಮತ್ತು ಆತನ ಎರಡನೆಯ ಬರೋಣದ ಕುರಿತಾದ ಪ್ರಶ್ನೆಗಳು. ಕ್ರಿ.ಶ. 70ರಲ್ಲಿ ಮತ್ತು ಯುಗದ ಸಮಾಪ್ತಿಯಲ್ಲಿ ಏನಾಗುವದೆಂಬುದರ ಕುರಿತಾಗಿ ಆತನ ಹೇಳಿಕೆಗಳು ಒಂದನ್ನೊಂದು ಅತಿವ್ಯಾಪಿಸುತ್ತವೆ ಮತ್ತು ಒಂದರಲ್ಲೊಂದು ಕೂಡಿಕೊಳ್ಳುತ್ತವೆ. ಅವುಗಳ ನಡುವೆ ಭಿನ್ನತೆಯನ್ನು ಗುರುತಿಸುವ ಅನೇಕ ಸಾರಿ ಕಷ್ಟಕರವೆಂದು ತೋರುತ್ತದೆ. ಒಂದು ಅಧಿಕ ಬಳಕೆ ಮಾಡಲ್ಪಡುವ ಸಾದೃಶ್ಯವೆಂದರೆ ಎರಡು ಪರ್ವತದ ತುದಿಗಳು - ಹತ್ತಿರದಲ್ಲೇ ಇರುವ ಒಂದು ಚಿಕ್ಕದಾದ ಪರ್ವತ ಹಾಗೂ ಅದರ ಹಿಂದೆ ದೂರದಲ್ಲಿರುವ ಒಂದು ದೊಡ್ಡ ಪರ್ವತ - ಅವುಗಳ ಚಿತ್ರಗಳು ಕೆಳಗೆ ಮೈದಾನದಲ್ಲಿ ಸ್ಪಷ್ಟವಾಗಿ ಗೋಚರಿಸುವ ಸ್ಥಳದಲ್ಲಿ ನಿಂತಿರುವ ವ್ಯಕ್ತಿಗೆ ಒಂದರಲ್ಲೊಂದು ಸೇರಿಕೊಂಡಿರುವಂತೆ ತೋರುತ್ತದೆ. ಬೈಬಲಿನ ಬಹುಪಾಲು ಪಂಡಿತರು ಯೆರೂಸಲೇಮಿನ ನಾಶನ ಹಾಗೂ ಎರಡನೆಯ ಬರೋಣಗಳು ಸಾವಿರಾರು ವರ್ಷಗಳ ಅಂತರದಿಂದ ಬೇರ್ಪಡಿಸಲ್ಪಟ್ಟಿರುವಾಗಲೂ, ಅವುಗಳ ನಡುವೆ ಒಂದು ನಿಕಟವಾದ ಸಂಬಂಧವಿದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ: ಮೊದಲನೆಯದ್ದು (ಯೆರೂಸಲೇಮಿನ ನಾಶನ) ಎರಡನೆಯದ್ದರ (ಎರಡನೆಯ ಬರೋಣ) ಛಾಯೆ ಆಗಿರುತ್ತದೆ.

ಯೋಚನೆಗಳು ಒಂದಲ್ಲೊಂದು ಮಿಶ್ರಣಗೊಳ್ಳುವ ವಾಸ್ತವಾಂಶದ ಹೊರತಾಗಿಯೂ, ಮತ್ತಾಯ 24ನೇ ಅಧ್ಯಾಯದ ಮೊದಲನೆಯ ಭಾಗದಲ್ಲಿನ ಒತ್ತು ಯೆರೂಸಲೇಮಿನ ನಾಶನ ಮೇಲೆ ಇರುತ್ತದೆ ಮತ್ತು ಕಡೆಯ ಭಾಗದಲ್ಲಿ ಒತ್ತು ಎರಡನೆಯ ಬರೋಣದ ಮೇಲಿರುತ್ತದೆಂಬುದನ್ನು ಅನೇಕರು ಒಪ್ಪಿಕೊಳ್ಳುತ್ತಾರೆ.

ಅಧ್ಯಾಯದ ಮೊದಲನೆಯ ಭಾಗದಲ್ಲಿ, 19 ಮತ್ತು 20 ವಚನಗಳನ್ನು ಗಮನಿಸಿರಿ: "ಆದರೆ ಆ ದಿನಗಳಲ್ಲಿ ಬಸುರಿಯರಿಗೂ ಮೊಲೆಕೂಸಿರುವ ಹೆಂಗಸರಿಗೂ ಆಗುವ ಕಷ್ಟವನ್ನು ಏನು ಹೇಳಲಿ. ಆಗ ಮಹಾಸಂಕಟ ಉಂಟಾಗುವದರಿಂದ ನಿಮ್ಮ ಪಲಾಯನವು ಚಳಿಗಾಲದಲ್ಲಿಯಾಗಲಿ ಸಬ್ಬತ್‌ದಿನದಲ್ಲಿಯಾಗಲಿ ಆಗಬಾರದೆಂದು ಪ್ರಾರ್ಥನೆಮಾಡಿರಿ." ಮಕ್ಕಳನ್ನು ಹಡೆಯುವದು ಅಥವಾ ಕಾಲ ಅಥವಾ ವಾರದ ದಿನ ಇವುಗಳಿಗೂ ಎರಡನೆಯ ಬರೋಣಕ್ಕೂ ಏನಾದರೂ ಸಂಬಂಧವಿರುತ್ತದೋ? ಇಲ್ಲ. ಹೇಗೂ, ಯೆರೂಸಲೇಮಿನ ನಾಶನಕ್ಕೆ ಸಂಬಂಧ ಪಟ್ಟಂತೆ ಈ ಕಾರಣಾಂಶಗಳು ಮಹತ್ವಪೂರ್ಣವಾಗಿದ್ದವು.

ಕಡೆಯ ಭಾಗದಲ್ಲಿ, 40 ಮತ್ತು 41 ವಚನಗಳನ್ನು ಗಮನಿಸಿರಿ: "ಆವಾಗ ಇಬ್ಬರು ಹೊಲದಲ್ಲಿರುವರು; ಒಬ್ಬನು ತೆಗೆದುಕೊಳ್ಳಲ್ಪಡುವನು, ಒಬ್ಬನು ಬಿಡಲ್ಪಡುವನು. ಇಬ್ಬರು ಹೆಂಗಸರು ಬೀಸುವ ಕಲ್ಲಿನ ಮುಂದೆ ಕೂತು ಬೀಸುತ್ತಿರುವರು; ಒಬ್ಬಳು ತೆಗೆದುಕೊಳ್ಳಲ್ಪಡುವಳು, ಒಬ್ಬಳು ಬಿಡಲ್ಪಡುವಳು." ಈ ವಚನಗಳು ಯೆರೂಸಲೇಮಿನ ನಾಶನದೊಂದಿಗೆ ಯಾವದೆ ಸಂಬಂಧವನ್ನು ಹೊಂದಿಲ್ಲವಾದರೂ, ಅವುಗಳು ಎರಡನೆಯ

ಬರೋಣದೊಂದಿಗೆ ಸಂಬಂಧವನ್ನು ಹೊಂದಿರುವದಂತೂ ನಿಜ.

ಮತ್ತಾಯ 24:4-35 (ಇದು ಯೆರೂಸಲೇಮಿನ ನಾಶನದ ಸುತ್ತ ಕೇಂದ್ರಕೃತವಾಗಿರುತ್ತದೆ) ಮತ್ತು 24:36-41 (ಇದು ಎರಡನೆಯ ಬರೋಣದ ಸುತ್ತ ಕೇಂದ್ರಿಕೃತವಾಗಿರುತ್ತದೆ) ನಡುವೆ ಅನೇಕ ವಿರುದ್ಧ ಹೋಲಿಕೆಗಳನ್ನು ಮಾಡಬಹುದು:

| **ಯೆರೂಲೇಮಿನ ನಾಶನ**<br>**ಮತ್ತಾಯ 24:4–35** | **ಎರಡನೆಯ ಬರೋಣ**<br>**ಮತ್ತಾಯ 24:36–41** |
|---|---|
| ಮೊದಲು ಪ್ರಕ್ಷುಬ್ಧ ಸಮಯಗಳಿರುವವು (ವಚನಗಳು 5-12). | ಮೊದಲು ಸಹಜ ಸಮಯಗಳಿರುವವು (ನೋಹನ ದಿನಗಳಂತೆ; ವಚನಗಳು 37-39). |
| ಕ್ರೈಸ್ತರು ತಿಳಿಯಬಹುದಾದ ಒಂದು ಸ್ಪಷ್ಟ ಸೂಚನೆಯಿರುವದು (ಯೆರೂಸಲೇಮನ್ನು ಸೈನ್ಯಗಳು ಮುತ್ತಿಗೆ ಹಾಕಿರುವದು; ವ. 15; ನೋಡಿರಿ ಲೂಕ 21:20). | ಎಚ್ಚರಿಸಲು ಯಾವ ಸೂಚನೆಯೂ ಇರುವದಿಲ್ಲ ಯಾರಿಗೂ ಸಮಯ ತಿಳಿಯದು (ವ. 36); ಅದು ಅನಿರೀಕ್ಷಿತವಾಗಿರುವದು (ವ. 39); ಅದು ಫಕ್ಕನೆ ಬರುವ ಕಳ್ಳನಂತೆ ಇರುವದು (ವ. 43). |
| ಜನರು ಈ ಘಟನೆಯಿಂದ ತಪ್ಪಿಸಿಕೊಂಡು ಓಡಿಹೋಗಲು ಶಕ್ತರಾಗುವರು (ವ. 16). | ಜನರು ಈ ಘಟನೆಯಿಂದ ತಪ್ಪಿಸಿಕೊಂಡು ಓಡಿ ಹೋಗಲು ಅಶಕ್ತರಾಗುವರು (ಒಬ್ಬನು ಎತ್ತಿಕೊಳ್ಳಲ್ಪಡುವನು, ಮತ್ತೊಬ್ಬನು ಕೈ ಬಿಡ ಲ್ಪಡುವನು, ವ. 40, 41). |

ಕೆಲವು ವ್ಯಾಖ್ಯಾನಕಾರರು ಮತ್ತಾಯ 24ನೇ ಅಧ್ಯಾಯದ ಆರಂಭದ ಭಾಗವು ಯೆರೂಸಲೇಮಿನ ನಾಶನದ ಬಗ್ಗೆ ಮತ್ತು ಕಡೆಯ ಭಾಗವು ಎರಡನೆಯ ಬರೋಣದ ಮೇಲೆ ಕೇಂದ್ರಿಕೃತವಾಗಿರುತ್ತವೆಂದು ಒಪ್ಪಿಕೊಳ್ಳುತ್ತಾರೆ, ಆದಾಗ್ಯೂ ಅವುಗಳು ಒಂದನ್ನೊಂದು ಅತಿವ್ಯಾಪಿಸುತ್ತವೆಂದು ಆಗಲೂ ವಾದಿಸುತ್ತಾರೆ. ಆದದರಿಂದ, ಅವರು ಸಂಕೋಚವಿಲ್ಲದೆ ಯಾವ ವಚನವು ಮೊದಲನೆಯ ಘಟನೆಯ ಕುರಿತಾಗಿ ಹೇಳುತ್ತದೆ ಮತ್ತು ಯಾವ ವಚನವು ಎರಡನೆಯ ಘಟನೆಯ ಕುರಿತು ಮಾತಾಡುತ್ತದೆಂಬುದನ್ನು ಸ್ವೇಚ್ಛೆಯಿಂದ ನಿರ್ಧರಿಸುತ್ತಾರೆ. ಈ ವಿಧಾನವು ಮತ್ತಾಯ 24ನ್ನು ಅರ್ಥೈಸುವ ಒಂದು ವಿಧವಾಗಿರುತ್ತದೆ; ಆದರೆ ನೀವು ಇಷ್ಟಬಂದ ಹಾಗೆ ವಚನಗಳನ್ನು ಆರಿಸಿಕೊಳ್ಳಬಲ್ಲಿರಾದರೆ, ಬೇರೆಯವರು ಹಾಗೆಯೇ ಮಾಡಬಲ್ಲರು ಎಂಬುದನ್ನು ಅರ್ಥಮಾಡಿಕೊಳ್ಳಿರಿ. ಅದರಿಂದ ಸಹಸ್ರವರ್ಷಪೂರ್ವ ವಾದಿಗಳು ಮತ್ತಾಯ 24ನೇ ಅಧ್ಯಾಯದ ಮೊದಲ ಭಾಗವು ಯೆರೂಸಲೇಮಿನ ನಾಶನದ ಬದಲಾಗಿ ಎರಡನೆಯ ಬರೋಣದ ಕುರಿತು ಮಾತಾಡುತ್ತದೆಂದು ಇಷ್ಟಬಂದ ಹಾಗೆ ನಿರ್ಧರಿಸುವದಕ್ಕೆ ಅವಕಾಶವಾಗುತ್ತದೆ.

ಅಲ್ಲದೆ ಈ ಅರ್ಥೈಸುವ ದಾರಿಯನ್ನು ಅನುಸರಿಸುವವನು 34ನೇ ವಚನವನ್ನು ಅರ್ಥನಿರೂಪಣೆ ಮಾಡತಕ್ಕದ್ದು ಎಂಬುದನ್ನು ಸಹ ಅರ್ಥಮಾಡಿಕೊಳ್ಳಬೇಕು, ಅಲ್ಲಿ ಯೇಸು ಹೀಗೆ ಹೇಳಿದನು, “ಇದೆಲ್ಲಾ ಆಗುವ ತನಕ ಈ ಸಂತತಿಯು ಅಳಿದುಹೋಗುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ.” ಈ ವಚನವನ್ನು ಅರ್ಥೈಸಿಕೊಳ್ಳುವ ಸ್ವಭಾವಿಕ ವಿಧವೆಂದರೆ 4ರಿಂದ 33 ವಚನಗಳಲ್ಲಿ ಕ್ರಿಸ್ತನು ಮುಂತಿಳಿಸಿದ್ದೆಲ್ಲವೂ ಆಗ ಜೀವಿಸುತ್ತಿದ್ದ ಕೆಲವರ ಜೀವಿತಕಾಲದಲ್ಲಿ ಸಂಭವಿಸಲಿತ್ತು ಎಂಬುದೆ. “ಸಂತತಿ” ಎಂಬದನ್ನು ಅನುವಾದಿಸಿರುವ ಗ್ರೀಕ್

ಪದವು (γενεά, *genea*) ಸಾಮಾನ್ಯವಾಗಿ ನಿರ್ದಿಷ್ಟವಾದ ಕಾಲಾವದಿಯಲ್ಲಿ ಬದುಕಿದ್ದವರನ್ನು ಸೂಚಿಸುತ್ತದೆ. ಯೇಸುವು ಮತ್ತಾಯ 24:34ನೇ ವಚನವನ್ನು ಮಾತಾಡಿದ ಸ್ವಲ್ಪ ಸಮಯದ ಬಳಿಕ, ಆತನು ತನ್ನ ಶ್ರೋತೃಗಳ ಮೇಲೆ ಬರಲಿದ್ದ ಭಯಂಕರವಾದ ಸಂಗತಿಗಳನ್ನು ಮುಂತಿಳಿಸುವದಕ್ಕೆ ಬಳಸಿದನು (ಮತ್ತಾಯ 23:36).

ಮತ್ತಾಯ 24:24-33 ವಚನಗಳು ಪೂರ್ತಿಯಾಗಿ ಅಥವಾ ಭಾಗಶಃ ಎರಡನೆಯ ಬರೋಣವನ್ನು ಸೂಚಿಸುವಂತೆ ಮಾಡುವದಕ್ಕೆ ಬಯಸುವವರು 34ನೇ ವಚನದ ವಿಷಯದಲ್ಲಿ ಕಷ್ಟವಿರುತ್ತದೆ. ಈ ವಾಕ್ಯಭಾಗದಲ್ಲಿರುವ "ಸಂತತಿ" ಎಂಬುದು "ಕುಲ," ಅಂದರೆ, ಯೆಹೂದ್ಯ ಕುಲ ಎಂದರ್ಥವನ್ನು ಕೊಡತಕ್ಕದ್ದೆಂದು ಅವರಲ್ಲಿ ಅನೇಕರು ವಾದಿಸುತ್ತಾರೆ. R. T. Franceನು ವ್ಯಾಖ್ಯಾನಿಸಿದ್ದೇನೆಂದರೆ ವಾಕ್ಯಭಾಗವು ಅರ್ಥನಿರೂಪಕರಿಗೆ ಒಂದು ಮುಜುಗರವಾಗಿರಲಿಲ್ಲವಾದಲ್ಲಿ "ಆ ನಾಮಪದಕ್ಕೆ ಅಂತಹ ಅಸಂಭವನೀಯ ಅರ್ಥವಿರುವದೆಂದು ಅಭಿಪ್ರಾಯ ಪಡುವದು ಅಸಾಧ್ಯದ ಮಾತಾಗಿತ್ತು."[6] Jack P. Lewisನು ಹೀಗೆ ಬರೆದನು:

> ಸಂತತಿಯ (*genea*) ಅರ್ಥವು ಇಡೀ ಅಧ್ಯಾಯದ ಅರ್ಥನಿರೂಪಣೆಗೆ ನಿರ್ಣಾಯಕವಾಗಿರುತ್ತದೆ. Jeromeನನ್ನು ಅನುಸರಿಸುವವನಾಗಿ, Scofieldನು ಅದು ಯೆಹೂದಿ ಕುಲವನ್ನು ಸೂಚಿಸುತ್ತದೆಂದು ಸಮರ್ಥನೆ ಮಾಡಿದನು, ಹೊಸ ಒಡಂಬಡಿಕೆಯೊಳಗೆ ಶಬ್ದಕೋಶವು *genea*ದ ಅರ್ಥವು ಕುಲ ಎಂಬುದಾಗಿ ಸೂಚಿಸುವ ಒಂದೇ ಒಂದು ಸಂಭಾವ್ಯ ಪ್ರಕರಣವು ಇರುತ್ತದೆ (ಲೂಕ 16:8). *Genos* (ಕುಲ) ಮತ್ತು *genea* (ಸಂತತಿ) ನಡುವೆ ಒಂದು ವ್ಯತ್ಯಾಸವಿರುತ್ತದೆ. ಇನ್ನು ಕೆಲವರು *genea*ದ ಅರ್ಥವು ಕಡೇ ಸಂತತಿ ಎಂದಾಗಿರುತ್ತದೆಂದು ವಾದಿಸಿರುತ್ತಾರೆ; ಅಂದರೆ, ಒಮ್ಮೆ ಸೂಚನೆಗಳು ಆರಂಭವಾದರೆ, ಈ ಎಲ್ಲಾ ಸಂಗತಿಗಳು ಒಂದು ಸಂತತಿಯ ಕಾಲದಲ್ಲಿ ಸಂಭವಿಸುವವು ಎಂಬದೆ (cf. 23:36). ಆದರೆ ಮತ್ತಾಯನ ಸುವಾರ್ತೆಯೊಳಗೆ ಬೇರೊಂದು ಕಡೆಯಲ್ಲಿ, *genea* ಎಂಬುದರ ಅರ್ಥವು ಒಂದು ಕಾಲದಲ್ಲಿ ಬದುಕಿದ್ದ ಜನರು ಎಂದು ಮತ್ತು ಸಾಮಾನ್ಯವಾಗಿ ಯೇಸುವಿನ ಸಮಯದಲ್ಲಿದ್ದ ಜನರು ಎಂದಾಗಿರುತ್ತದೆ (1:17; 11:16; 12:39, 41, 45; 23:36; ಮಾರ್ಕ 8:38; ಲೂಕ 11:50ರಿಂದ ನಂತರದ ವಚನಗಳು; 17:25), ಮತ್ತು ಅದು ಇಲ್ಲಿ ಸಹ ಅದೇ ಅರ್ಥವನ್ನು ಹೊಂದಿರುತ್ತದೆಂಬುದರಲ್ಲಿ ಸಂಶಯವೇ ಇಲ್ಲ.[7]

ಈ ಅಧ್ಯಯನದಲ್ಲಿ, ಮತ್ತಾಯ 24:34ನೇ ವಚನವನ್ನು ಕ್ರಿಸ್ತನು ಆ ಮಾತುಗಳನ್ನು ನುಡಿದ ಸಮಯದಲ್ಲಿ ಬದುಕಿದ್ದ ಸಂತತಿಯವರಿಗೆ ಮುಂದಿನ ವಚನಗಳಲ್ಲಿನ ಘಟನೆಗಳು ಸಂಭವಿಸಲಿದ್ದವು ಎಂಬ ಅರ್ಥವನ್ನು ನೀಡುತ್ತದೆ ಎಂದು ಪರಿಗಣಿಸಿಕೊಳ್ಳಲಾಗುವದು. ಈ ನಿಯಮಕ್ಕೆ ಒಂದು ಸಂಭಾವ್ಯ ವಿನಾಯಿತಿ ಎಂದರೆ ಅದು 27ನೇ ವಚನ, ಅದರಲ್ಲಿ ಯೇಸುವು ತನ್ನ ಎರಡನೆಯ ಬರೋಣವನ್ನು ಸೂಚಿಸಿ ಹೇಳುವಂತೆ ತೋರುತ್ತದೆ. ಈ ಅರ್ಥೈಸುವ ದಾರಿಯಿಂದ ಎದುರಾಗುವಂಥ ಸಮಸ್ಯೆಗಳ ಕುರಿತಾಗಿ ಅವುಗಳು ವಾಕ್ಯಭಾಗದಲ್ಲಿ ಎದುರಾದಂತೆಲ್ಲಾ ಚರ್ಚಿಸಲ್ಪಡಲಿದ್ದಾವೆ.

# ಯೆರೂಸಲೇಮಿನ ನಾಶನ
# (ಮತ್ತಾಯ 24:4-35; ಮಾರ್ಕ 13:5-31; ಲೂಕ 21:8-36)

### ವಿವಿಧ "ಸೂಚನೆ-ಅಲ್ಲದವುಗಳು"
### (ಮತ್ತಾಯ 24:4-14; ಮಾರ್ಕ 13:5-15; ಲೂಕ 21:8-19)

ಕ್ರಿಸ್ತನು ತನ್ನ ಪ್ರವಚನವನ್ನು ಹಲವಾರು "ಸೂಚನೆ-ಅಲ್ಲದವುಗಳ" ಮೂಲಕ ಆರಂಭಿಸಿದನು. ಯೆರೂಸಲೇಮಿನ ನಾಶನವು ಯೆಹೂದ್ಯರಿಗೆ ಎಂತಹ ಒಂದು ಮನೋಕ್ಷೋಭೆ ಉಂಟು ಮಾಡುವಂಥಹ ಘಟನೆಯಾಗಿತ್ತೆಂದರೆ ಯೇಸುವಿನ ಪ್ರವಾದನೆಯ ನೆರವೇರಿಕೆಯನ್ನು ಎದುರುನೋಡುತ್ತಿದ್ದವರಿಗೆ ಅದು ಇನ್ನೇನು ಸಂಭವಿಸಲಿದೆ ಎಂಬುದಕ್ಕೆ ಎಲ್ಲವನ್ನೂ ಅವರು ಒಂದು ಸೂಚನೆ ಎಂಬಂತೆ ಕಾಣುತ್ತಿದ್ದರು. ಈ ದೃಷ್ಟಾಂತವನ್ನು ಆಲೋಚಿಸಿರಿ: ಒಬ್ಬ ಮನುಷ್ಯನು ಮತ್ತೊಬ್ಬನ ಮನೆಯು ನಾಶವಾಗುವದೆಂದು ಪ್ರವಾದನೆಯನ್ನು ಹೇಳಿದ್ದಾದರೆ - ಮತ್ತು ಅವನು ಆತನ ಮಾತನ್ನು ನಂಬಿದ್ದಾದರೆ - ಬರುವಂಥ ಪ್ರತಿಯೊಂದು ಬಿರುಗಾಳಿಯೂ ಅವನಲ್ಲಿ ಕಳವಳವುಂಟು ಮಾಡುವದಷ್ಟೆ. ಕ್ರಿಸ್ತನಿಗೆ ತನ್ನ ಹಿಂಬಾಲಕರು ದಾರಿ ತಪ್ಪಿಸಲ್ಪಡುವದು ಇಷ್ಟವಿರಲಿಲ್ಲ (ಮತ್ತಾಯ 24:4; ಮಾರ್ಕ 13:5; ಲೂಕ 21:8), ಆದ್ದರಿಂದ ಆತನು ಕೆಲವೊಂದು *ಸಂಭಾವ್ಯವಾದ ದಾರಿತಪ್ಪಿಸಬಹುದಾದಂಥ ಸೂಚನೆಗಳ*ನ್ನು ಕುರಿತು ತಿಳಿಸಿದನು.

*ಸುಳ್ಳು ಕ್ರಿಸ್ತರು.* ಸುಳ್ಳು ಮೆಸ್ಸೀಯರು ಎದ್ದೇಳುವರೆಂದು ಆತನು ಹೇಳಿದನು (ಮತ್ತಾಯ 24:5, 24; ಮಾರ್ಕ 13:6, 22; ಲೂಕ 21:8). "ಅವರ ಹಿಂದೆ ಹೋಗಬೇಡಿರಿ" ಎಂದು ಆತನು ಎಚ್ಚರಿಸಿದನು (ಲೂಕ 21:8). ಆ ದಿನದಲ್ಲಿ ನಿರಾಧಾರವಾದ ಘೋಷಣೆಗಳನ್ನು ಮಾಡುವದು ಮತ್ತು ತಮಗೆ ಹಿಂಬಾಲಕರನ್ನು ಆಕರ್ಷಿಸಿಕೊಳ್ಳುವದು ಸರ್ವಸಾಧಾರಣವಾಗಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 5:34-39; 21:38). Josephusನು ಆ ಕಾಲದಲ್ಲಿ ಎದ್ದು ತಮಗಾಗಿ ಒಂದು ಅನುಯಾಯಿ ಗುಂಪನ್ನು ನಡಿಸಿದ ಹಲವಾರು ವ್ಯಕ್ತಿಗಳ ಬಗ್ಗೆ ಪ್ರಸ್ತಾಪಿಸಿದನು.[8]

*ಯುದ್ಧಗಳಾಗುವದು ಮತ್ತು ಯುದ್ಧಗಳ ವದಂತಿ.* ಯುದ್ಧಗಳು ಮತ್ತು ಇತರ ಗಲಭೆಗಳ ವದಂತಿಗಳು ಶಿಷ್ಯರಲ್ಲಿ ಕಳವಳವನ್ನುಂಟು ಮಾಡಬಾರದಾಗಿತ್ತು (ಮತ್ತಾಯ 24:6; ಮಾರ್ಕ 13:7; ಲೂಕ 21:9). ಕರ್ತನು ಒತ್ತಿ ಹೇಳಿದ್ದೇನೆಂದರೆ, "ಯಾಕಂದರೆ ಹಾಗಾಗುವದು ಅಗತ್ಯ. ಆದರೂ ಇದು ಇನ್ನೂ [ಯೆರೂಸಲೇಮ್ ಹಾಗೂ ದೇವಾಲಯಗಳ] ಅಂತ್ಯಕಾಲವಲ್ಲ" (ಮತ್ತಾಯ 24:6; ನೋಡಿರಿ ಮಾರ್ಕ 13:7; ಲೂಕ 21:9). ರೋಮನ್ ಸಾಮ್ರಾಜ್ಯವು ಶಾಂತಿಯಿಂದಿದ್ದ ಕಾಲದಲ್ಲಿ ಈ ಮಾತುಗಳನ್ನು ಹೇಳಲಾಗಿತ್ತು, ಆದರೆ, ಇತಿಹಾಸಕಾರರ ಪ್ರಕಾರವಾಗಿ, ಬಹಳ ಶೀಘ್ರದಲ್ಲೇ ಪುನಃ ಯುದ್ಧವು ಆರಂಭಗೊಂಡಿತ್ತು.

*ಪ್ರಾಕೃತಿಕ ವಿಕೋಪಗಳು.* ಅಲ್ಲದೆ ಬರಗಳು, ವ್ಯಾಧಿಗಳು, ಮತ್ತು ಭೂಕಂಪಗಳಂತಹ ಪ್ರಾಕೃತಿಕ ವಿಕೋಪಗಳು, ಯಾವಾಗಲೂ ಇರುವಂತೆಯೇ, ಸಂಭವಿಸುತ್ತವೆಂದು ಸಹ ಗಮನಕ್ಕೆ ತರುತ್ತಾನೆ (ಮತ್ತಾಯ 24:7; ಮಾರ್ಕ 13:8). ಲೂಕನ ಬರವಣಿಗೆಯು ಇದಕ್ಕೆ "ಉಪದ್ರವಗಳೂ ಬರುವವು; ಉತ್ಪಾತಗಳೂ ಆಕಾಶದಲ್ಲಿ ಮಹಾ ಸೂಚನೆಗಳೂ ತೋರುವವು" ಎಂಬುದನ್ನು ಸೇರ್ಪಡೆಗೊಳಿಸುತ್ತದೆ (ಲೂಕ 21:11); ಈ ಪದಗಳಲ್ಲಿ ನಿರ್ದಿಷ್ಟ ಪ್ರಸ್ತಾಪಿಸದೆ ಇರುವಂಥ ಯಾವದೇ ವಿಧವಾದ ಪ್ರಾಕೃತಿಕ ವಿಕೋಪಗಳನ್ನು - ಬಿರುಗಾಳಿ, ಆನೆಕಲ್ಲು, ಮತ್ತು ಪ್ರಳಯಗಳು - ಒಳಗೊಂಡಿರುತ್ತದೆ. ಯೇಸು ಇವುಗಳನ್ನು "ಇವೆಲ್ಲಾ [ನೂತನ ಕಾಲವು ಹುಟ್ಟುವ] ಪ್ರಸವವೇದನೆಯ ಪ್ರಾರಂಭ" ಎಂದು ಕರೆದನು (ಮತ್ತಾಯ

24:8; ನೊಡಿರಿ ಮಾರ್ಕ 13:8). "ಆರಂಭ" ಎಂಬ ಪದವು 6 ಮತ್ತು 14 ವಚನಗಳಲ್ಲಿರುವ "ಅಂತ್ಯ" ಎಂಬುದರೊಂದಿಗೆ ವಿರುದ್ಧ ಹೋಲಿಕೆಯಲ್ಲಿರುತ್ತದೆ. ಸರಳವಾಗಿ ಹೇಳುವದಾದರೆ, ಈ ಪ್ರಾಕೃತಿಕ ವಿಕೋಪಗಳು "ಅಂತ್ಯಕಾಲದ ಸೂಚನೆಗಳು" ಆಗುವ*ದಿಲ್ಲ*.

*ಸಭೆಗೆ ಸಂಬಂಧಿಸಿದ ಬಿಕ್ಕಟ್ಟುಗಳು.* ಹಿಂಸೆಯನ್ನು ನಿರೀಕ್ಷಿಸಬೇಕೆಂದು ಯೇಸುವಿನ ಹಿಂಬಾಲಕರಿಗೆ ಎಚ್ಚರಿಸಲಾಯಿತು (ಮತ್ತಾಯ 24:9; ಮಾರ್ಕ 13:9, 13; ಲೂಕ 21:12, 16, 17). ಅಪೊಸ್ತಲರ ಕೃತ್ಯಗಳು ಮತ್ತು ಹೊಸ ಒಡಂಬಡಿಕೆಯ ಇತರ ಪುಸ್ತಕಗಳು ಯೆಹೂದ್ಯರು ಹಾಗೂ ಬೇರೆಯವರ ಮೂಲಕ ಸಭೆಯ ಮೇಲೆ ಆ ಕಾಲದಲ್ಲಿ ಬಂದಂಥ ಹಿಂಸೆಯ ಕುರಿತು ತಿಳಿಸುತ್ತವೆ. ಹೇಗೂ, ಕರ್ತನು ತನ್ನ ಶಿಷ್ಯರೊಂದಿಗೆ ಇರುವೆನೆಂದು ವಾಗ್ದಾನ ಮಾಡಿದನು (ಲೂಕ 21:18). ಅವರಲ್ಲಿ ಕೆಲವರು ಕೊಲ್ಲಲ್ಪಡುವರೆಂದು ಕ್ರಿಸ್ತನು ಈಗಾಗಲೇ ಹೇಳಿದ್ದನಾದ್ದರಿಂದ (ಲೂಕ 21:16), "ಆದರೂ ನಿಮ್ಮದೊಂದು ತಲೆಕೂದಲಾದರೂ ನಾಶವಾಗುವದಿಲ್ಲ" (ಲೂಕ 21:18) ಎಂಬ ವಾಗ್ದಾನದ ಅರ್ಥವು, ಅವರು ಕೊಲ್ಲಲ್ಪಟ್ಟಾಗ್ಯೂ ಅವರು ನಾಶವಾಗುವವರಲ್ಲ ಎಂದಾಗಿರತಕ್ಕದ್ದು. ಕರ್ತನು ಅವರಿಗೆ ಪುನರುತ್ಥಾನದಲ್ಲಿ ಅಂತಿಮ ಜಯವನ್ನು ವಾಗ್ದಾನ ಮಾಡುತ್ತಿದ್ದಾನೆ.

ಅಲ್ಲದೆ ಹಿಂಸೆಯನ್ನು ತಮ್ಮ ನಂಬಿಕೆಯ ಕುರಿತು ಸಾಕ್ಷಿ ಹೇಳುವದಕ್ಕೆ ದೊರೆತ ಒಂದು ಸದವಕಾಶವಾಗಿ ಕಾಣಬೇಕೆಂದು ಸಹ ಅವರಿಗೆ ಹೇಳಿದನು (ಮಾರ್ಕ 13:9, 11; ಲೂಕ 21:12–15). ಯೇಸುವು ಪ್ರವಾದಿಸಿದ್ದ ಪ್ರಕಾರವೇ, ಪೌಲನು ದೇಶಾಧಿಪತಿಗಳ ಮುಂದೆ ಮತ್ತು ರಾಜರ ಮುಂದೆ ನಿಂತನು (ನೋಡಿರಿ ಅಪೊಸ್ತಲರ ಕೃತ್ಯಗಳು 26); ಬಹುಶಃ ಅಪೊಸ್ತಲರಲ್ಲಿ ಬೇರೆ ಕೆಲವರು ಸಹ ನಿಂತಿರಬಹುದಾಗಿದೆ. ಪವಿತ್ರಾತ್ಮ-ಪ್ರೇರಿತವಾದ ಪ್ರತಿವಾದದ ವಾಗ್ದಾನವು (ಮಾರ್ಕ 13:11; ಲೂಕ 21:14, 15) ಅಪೊಸ್ತಲರಿಗೆ ಮಾಡಲ್ಪಟ್ಟಿತೇ ಹೊರತು, ನಮಗೆ ಅಲ್ಲ. ನಾವು ಬೇರೆಯವರಿಗೆ ಉಪದೇಶಿಸುವ ಮುನ್ನ, ನಾವು ದೇವರ ವಾಕ್ಯವನ್ನು ಅಧ್ಯಯನ ಮಾಡತಕ್ಕದ್ದು.

ಇನ್ನೊಂದು ಸಮಸ್ಯೆಯು ಏನೆಂದರೆ ಸುಳ್ಳು ಪ್ರವಾದಿಗಳು ಅನೇಕರನ್ನು ಮೋಸಗೊಳಿಸುವರು (ಮತ್ತಾಯ 24:11, 24; ಮಾರ್ಕ 13:22). ಈ ಮುಂತಿಳಿಸುವಿಕೆಯು ಮೊದಲನೆಯ ಶತಮಾನದಲ್ಲಿ ನೆರವೇರಲಾರಂಭಿಸಿತ್ತು (ನೋಡಿರಿ 2 ಪೇತ್ರ 2:1; 1 ಯೋಹಾನ 4:1).

ಹಿಂಸೆ ಮತ್ತು ವಂಚನೆಯ ಕಾರಣದಿಂದಾಗಿ, ಕೆಲವು ಕ್ರೈಸ್ತರು ಹಿಂಜರಿದು ಹೋಗುವರು. ಕೆಲವರು ಕುಟುಂಬ ಸದಸ್ಯರೂ ಸೇರಿದಂತೆ, ಜೊತೆ ಕ್ರೈಸ್ತರಿಗೆ ವಿಶ್ವಾಸದ್ರೋಹವನ್ನು ಸಹ ಮಾಡುವರು (ಮತ್ತಾಯ 24:10, 12; ಮಾರ್ಕ 13:12; ಲೂಕ 21:16). ಈ ಮಾತುಗಳನ್ನು ಹೇಳುವ ವೇಳೆ ಕ್ರಿಸ್ತನ ಮುಖದಲ್ಲಿದ್ದ ತೀವ್ರಾಸಕ್ತಿಯನ್ನೊಮ್ಮೆ ಊಹಿಸಿಕೊಳ್ಳಿರಿ, "ಆದರೆ ಕಡೇವರೆಗೂ ತಾಳುವವನು ರಕ್ಷಣೆಹೊಂದುವನು" (ಮತ್ತಾಯ 24:13; ಮಾರ್ಕ 13:13; ನೋಡಿ ಲೂಕ 21:19). ಆತನು ಅವರ ವಿಷಯದಲ್ಲಿ - ಮತ್ತು ನಮ್ಮ ವಿಷಯದಲ್ಲಿ - ನಂಬಿಗಸ್ತರಾಗಿ ಉಳಿಯಬೇಕೆಂದು ಎಷ್ಟೊಂದು ಹಂಬಲಿಸಿದನು.

*ಸುವಾರ್ತೆಯ ಪ್ರಸರಣೆ.* ಯೇಸುವು "ಇದಲ್ಲದೆ ಪರಲೋಕರಾಜ್ಯದ ಈ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲಾಗುವದು; ಆಗ ಅಂತ್ಯವು ಬರುವದು" (ಮತ್ತಾಯ 24:14; ನೋಡಿರಿ ಮಾರ್ಕ 13:10) ಎಂದು ಹೇಳುವ ಮೂಲಕ "ಸೂಚನೆ-ಅಲ್ಲದವುಗಳ" ಪಟ್ಟಿಯನ್ನು ಮುಕ್ತಾಯಕ್ಕೆ ತರುತ್ತಾನೆ. ಹಲವು ವಾರಗಳ ನಂತರ, ಪರಲೋಕಾರೋಹಣಕ್ಕೆ ಸ್ವಲ್ಪ ಮುಂಚೆ, ಕರ್ತನು ಅಪೊಸ್ತಲರಿಗೆ "ನೀವು ಲೋಕದ ಎಲ್ಲಾ

ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ" (ಮಾರ್ಕ 16:15), "ಎಲ್ಲಾ ದೇಶದ ಜನರನ್ನು ಶಿಷ್ಯರನ್ನಾಗಿ ಮಾಡಿರಿ" (ಮತ್ತಾಯ 28:19) ಎಂಬ ಆದೇಶವನ್ನು ಕೊಟ್ಟನು. ಕ್ರಿಸ್ತನ ಹಿಂಬಾಲಕರು ಸುವಾರ್ತೆಯನ್ನು "ಭೂಲೋಕದ ಕಟ್ಟಕಡೆಯ ವರೆಗೂ" ತೆಗೆದುಕೊಂಡು ಹೋಗುವ ಲಕ್ಷ್ಯವನ್ನು ಹೇಗೆ ನೆರವೇರಿಸಿದರೆಂಬ ಕುರಿತ ಕಥೆಯನ್ನು ಅಪೊಸ್ತಲರ ಕೃತ್ಯಗಳು ಪುಸ್ತಕವು ತಿಳಿಸುತ್ತದೆ (ಅಪೊಸ್ತಲರ ಕೃತ್ಯಗಳು 1:8). ಹೇಗೂ, ಇದೆಲ್ಲವೂ ನಡೆಯುವದಕ್ಕೆ ಸಮಯವು ಬೇಕಾಗಿತ್ತು. ಆದ್ದರಿಂದ ಕರ್ತನು ದೇವಾಲಯದ "ಅಂತ್ಯ" ಭವಿಷ್ಯದಲ್ಲಿ ಅನೇಕ ವರ್ಷಗಳ ಬಳಿಕ ನಡೆಯಲಿದೆ ಎಂದು ಒತ್ತಿ ಹೇಳಿದನು.

ಸುಮಾರು ಕ್ರಿ.ಶ. 63ರಲ್ಲಿ, ಯೆರೂಸಲೇಮ ಪಟ್ಟಣವು ನಾಶಗೊಳಿಸಲ್ಪಡುವದಕ್ಕೆ ಏಳು ವರ್ಷ ಮುಂಚೆ, ಸುವಾರ್ತೆಯು "ಸರ್ವಸೃಷ್ಟಿಗೆ ಸಾರಲ್ಪಟ್ಟಿದೆ" ಎಂದು ಪೌಲನು ಬರೆಯುವದಕ್ಕೆ ಶಕ್ತನಾಗಿದ್ದನು (ಕೊಲೊಸ್ಸೆ 1:23). ಈ ವಾಕ್ಯಭಾಗದಲ್ಲಿ "ಸರ್ವಸೃಷ್ಟಿ" ಎಂಬ ಪದಗುಚ್ಛವು ಪ್ರಾಥಮಿಕವಾಗಿ ರೋಮನ್ ಸಾಮ್ರಾಜ್ಯದಲ್ಲಿದ್ದ ಜನರನ್ನು ಸೂಚಿಸುತ್ತದೆ. ಲೂಕ 2:1ರಲ್ಲಿ "ಲೋಕವೆಲ್ಲಾ" ಎಂಬ ಪದಗುಚ್ಛವು ರೋಮನ್ ಸಾಮ್ರಾಜ್ಯವನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುತ್ತದೆ. ಪೌಲನು ಸ್ಪಷ್ಟವಾಗಿರುವ ಪ್ರಕಾರ ನಾಗರೀಕ ಪ್ರಪಂಚದ ಪ್ರತಿಯೊಂದು ಭಾಗಕ್ಕೂ ಸುವಾರ್ತೆಯು ಹರಡಿರುವದರ ಬಗ್ಗೆ ಒತ್ತಿ ಹೇಳುತ್ತಿದ್ದಾನೆ (ನೋಡಿರಿ ರೋಮಾ 1:5, 8; ಕೊಲೊಸ್ಸೆ 1:5, 6; 1 ಥೆಸಲೋನಿಕ 1:8).

### ನಿಜವಾದ ಸೂಚನೆ (ಮತ್ತಾಯ 24:15, 16; ಮಾರ್ಕ 13:14; ಲೂಕ 21:20)

ಯೆರೂಸಲೇಮಿನ ನಾಶನಕ್ಕೆ ನೇರವಾಗಿ ಸಂಬಂಧವಿಲ್ಲದ ಘಟನೆಗಳ ಪಟ್ಟಿಯನ್ನು ಕೊಟ್ಟ ಬಳಿಕ, ತನ್ನ ಹಿಂಬಾಲಕರು ಎದುರುನೋಡತಕ್ಕ ಸೂಚನೆಯನ್ನು ಕೊಟ್ಟನು. ಆತನು ಹೀಗೆ ಹೇಳಿದನು, "ಆದದರಿಂದ ಪ್ರವಾದಿಯಾದ ದಾನಿಯೇಲನು ಹೇಳಿದಂಥ ಹಾಳುಮಾಡುವ ಅಸಹ್ಯ ವಸ್ತುವು ಪವಿತ್ರಸ್ಥಾನದಲ್ಲಿ ನಿಂತಿರುವದನ್ನು ನೀವು ಕಾಣುವಾಗ (ಇದನ್ನು ಓದುವವನು ತಿಳುಕೊಳ್ಳಲಿ) ಯೂದಾಯದಲ್ಲಿರುವವರು ಬೆಟ್ಟಗಳಿಗೆ ಓಡಿಹೋಗಲಿ" (ಮತ್ತಾಯ 24:15, 16). ಮಾರ್ಕನ ಕಥನದಲ್ಲಿ "ಇದಲ್ಲದೆ ಹಾಳುಮಾಡುವ ಅಸಹ್ಯ ವಸ್ತುವು ನಿಲ್ಲಬಾರದ ಸ್ಥಳದಲ್ಲಿ ನಿಂತಿರುವದನ್ನು ನೀವು ಕಾಣುವಾಗ" ಎಂದಿರುತ್ತದೆ (ಮಾರ್ಕ 13:14).

ಸಂವೇದನಾಶೀಲರು "ಇದಲ್ಲದೆ ಹಾಳುಮಾಡುವ ಅಸಹ್ಯ ವಸ್ತುವು ನಿಲ್ಲಬಾರದ ಸ್ಥಳದಲ್ಲಿ ನಿಂತಿರುವದನ್ನು ನೀವು ಕಾಣುವಾಗ" ಎಂಬುದರ ಬಗ್ಗೆ ಊಹಾಪೋಹಗಳನ್ನು ಮಾಡುವದರಲ್ಲಿ ಸಂತೋಷಪಡುತ್ತಾರೆ, ಆದರೆ ಸುವಾರ್ತೆಯ ಕಥನಗಳು ನಮಗೊಂದು ಪ್ರೇರಿತವಾದ ಅರ್ಥನಿರೂಪಣೆಯನ್ನು ಕೊಡುತ್ತವೆ. ಲೂಕನ ಸುವಾರ್ತೆಯಲ್ಲಿರುವ ಸಮಾನಾರ್ಥದ ವಾಕ್ಯಭಾಗದಲ್ಲಿ ಯೇಸುವು ಹೀಗೆ ಹೇಳಿದನು, "ಆದರೆ ದಂಡುಗಳು *ಯೆರೂಸಲೇಮ್ ಪಟ್ಟಣಕ್ಕೆ ಮುತ್ತಿಗೆ ಹಾಕಿರುವದನ್ನು* ನೀವು ಕಾಣುವಾಗ ಅದು ಹಾಳಾಗುವ ಕಾಲ ಸಮೀಪವಾಯಿತೆಂದು ತಿಳುಕೊಳ್ಳಿರಿ" (ಲೂಕ 21:20; ಒತ್ತಿ ಹೇಳಿದ್ದು ನನ್ನದು). ಆ ಕಾಲದಲ್ಲಿ ಯೆರೂಸಲೇಮಿನೊಳಗೆ ವಾಸಿಸುತ್ತಿದ್ದ ಅನೇಕರು ಕ್ರಿ.ಶ. 60ರ ಕಡೆಯ ದಿನಗಳಲ್ಲಿ ಅವರ ಪಟ್ಟಣವು ರೋಮನ್ ಸಾಮ್ರಾಜ್ಯದಿಂದ ಮುತ್ತಿಗೆ ಹಾಕಲ್ಪಟ್ಟದ್ದನ್ನು ಕಂಡರು.

ಕ್ರಿಸ್ತನು ತನ್ನ ಶ್ರೋತೃಗಳಿಗೆ "ಪ್ರವಾದಿಯಾದ ದಾನಿಯೇಲನು ಹೇಳಿದಂಥ ಹಾಳುಮಾಡುವ ಅಸಹ್ಯ ವಸ್ತು" ಕುರಿತು ಹೇಳಿದ್ದನು. "ಹಾಳುಮಾಡುವ" ಮತ್ತು "ಅಸಹ್ಯವಸ್ತು" ಎಂಬ ಪದಗಳು, ದಾನಿಯೇಲ ಪುಸ್ತಕದಲ್ಲಿ ಹಲವಾರು ಸಾರಿ ವಿವಿಧ ರೂಪಗಳಲ್ಲಿ ಕಂಡು ಬರುತ್ತವೆ: 9:26, 27; 11:31; 12:11. ದಾನಿಯೇಲ 11:31 ಮತ್ತು 12:11 ವಾಕ್ಯಭಾಗಗಳು ಬಹುಶಃ Antiochus Epiphanesನನ್ನು ಸೂಚಿಸುತ್ತವೆ, ಈತನು Seleucidರ ಅರಸನಾಗಿದ್ದು ಆತನು

ಯೆರೂಸಲೇಮಿನಲ್ಲಿ ಅನ್ಯಧರ್ಮಿಯ ಧಾರ್ಮಿಕವಿಧಿಗಳನ್ನು ಪರಿಚಯಿಸಲು ಪ್ರಯತ್ನಿಸಿದ್ದರಿಂದ ಮಕಬ್ಬಿಯರ ದಂಗೆಗೆ ದಾರಿ ಮಾಡಿತ್ತು (ಕ್ರಿ.ಪೂ. 167),[9] ಅದೇ ವೇಳೆಯಲ್ಲಿ 9:26, 27 ವಚನಗಳು ರೋಮನ್ನರಿಂದ ಯೆರೂಸಲೇಮ ಪಟ್ಟಣವು ನಾಶವಾಗುವ ಕುರಿತು ನೇರವಾದ ಉಲ್ಲೇಖ ಮಾಡುತ್ತವೆ. ದಾನಿಯೇಲ 9ನೇ ಅಧ್ಯಾಯದಲ್ಲಿನ ವಚನಗಳು ಜನರು ಮೆಸ್ಸೀಯನನ್ನು ತಿರಸ್ಕರಿಸಿದ ಕಾರಣದಿಂದಾಗಿ ಪಟ್ಟಣ ಹಾಗೂ ದೇವಾಲಯಗಳು ನಾಶಗೊಳಿಸಲ್ಪಡುವವು ಎಂಬುದನ್ನು ಪ್ರವಾದಿಸುತ್ತವೆ. ಅದಕ್ಕೆ ಸಂಬಂಧಿಸಿದ ಭಾಗಗಳು ಇಲ್ಲಿವೆ: "... ಅಭಿಷಿಕ್ತನೊಬ್ಬನು ಛೇದಿಸಲ್ಪಡುವನು [ಅಂದರೆ, ತಿರಸ್ಕರಿಸಲ್ಪಟ್ಟು ಕೊಲ್ಲಲ್ಪಡುವನು]; ... ನುಗ್ಗುವ ಪ್ರಭುವಿನ ಜನರು ಪಟ್ಟಣವನ್ನೂ ಪವಿತ್ರಾಲಯವನ್ನೂ ಹಾಳುಮಾಡುವರು" (ದಾನಿಯೇಲ 9:26). Wayne Jacksonನು ಹೀಗೆ ಬರೆದನು,

> "ಹಾಳುಮಾಡುವ ಅಸಹ್ಯವಸ್ತು" ಸೇನಾನಾಯಕನಾದ Titusನ ("ಪ್ರಭು"; 9:26) ನಾಯಕತ್ವದಲ್ಲಿದ್ದ ರೋಮನ್ ಸೈನ್ಯವಾಗಿತ್ತು, ಈತನು ಕ್ರಿ.ಶ. 70ರಲ್ಲಿ ಯೆರೂಸಲೇಮನ್ನು ದಮನ ಮಾಡಿದನು ...
>
> ಈ ಘಟನೆಯನ್ನು ದಾನಿಯೇಲನು "ಹಾಳುಮಾಡುವ ಅಸಹ್ಯವಸ್ತು" ಎಂದು ಕರೆಯಲ್ಪಟ್ಟಿತು ಯಾಕೆಂದರೆ ದಾವೀದನ ನಗರವು *ಹಾಳುಮಾಡಲ್ಪಟ್ಟಿದ್ದು* ರೋಮನ್ ಸೈನ್ಯದ ಮೂಲಕ - ಒಂದು *ಅಸಹ್ಯ* ಸೈನ್ಯ ಯಾಕೆಂದರೆ ಅದು ವಿಗ್ರಹಾರಾಧಕ ಹೊದಿಕೆಯನ್ನು ಹೊಂದಿತ್ತು ... ಯೆಹೂದ್ಯರು [ಸಹ] ಇಬ್ರಿಯ ದೇಶದ ನಾಶನವು ದಾನಿಯೇಲನ ಗಮನಾರ್ಹವಾದ ಪ್ರವಾದನೆಯ ಒಂದು ನೆರವೇರಿಕೆಯಾಗಿತ್ತೆಂಬುದನ್ನು ಗುರುತಿಸಿದ್ದರು. ಯೆಹೂದಿ ಇತಿಹಾಸಕಾರನಾದ, Josephusನು ಹೇಳಿದ್ದೇನೆಂದರೆ, "ದಾನಿಯೇಲನು ರೋಮನ್ ಸರ್ಕಾರದ ವಿಷಯದಲ್ಲಿ ಸಹ ಬರೆದನು, ಮತ್ತು ನಮ್ಮ ದೇಶವು ಅವರಿಂದ ಹಾಳುಮಾಡಲ್ಪಡತಕ್ಕದ್ದು ಎಂಬದೆ."[10]

ಹಳೆಯ ಒಡಂಬಡಿಕೆಯಲ್ಲಿ, "ಅಸಹ್ಯ" ಎಂಬ ಪದವು ಸಾಮಾನ್ಯವಾಗಿ ವಿಗ್ರಹಾರಾಧನೆಯನ್ನು ಸೂಚಿಸುವದಕ್ಕೆ ಬಳಸಲಾಗುತ್ತಿತ್ತು. ರೋಮನ್ ಸೈನಿಕರು ತಮ್ಮ ಪತಾಕೆಗಳ ಮೇಲೆ ಮುದ್ರಿಸಿಕೊಂಡಿರುತ್ತಿದ್ದ ಲಾಂಛನಗಳನ್ನು ಪೂಜಿಸುತ್ತಿದ್ದರು. ಈ "ಅಸಹ್ಯ"ದ ವಿಷಯದಲ್ಲಿ ಯೆಹೂದ್ಯರು ಹಾಗೂ ರೋಮನ್ ಸೈನ್ಯಗಳ ನಡುವೆ ನಡೆದ ಕಾದಾಟಗಳ ಬಗ್ಗೆ Josephusನು ಬರೆದನು.[11]

## ನಿಜವಾದ ಸೂಚನೆ ಸಂಭವಿಸುವಾಗ ಏನು ಮಾಡಬೇಕು (ಮತ್ತಾಯ 24:16-20; ಮಾರ್ಕ 13:14-18; ಲೂಕ 21:21, 23)

ಯೇಸುವಿನ ಹಿಂಬಾಲಕರು "ಯೆರೂಸಲೇಮ್ ಪಟ್ಟಣಕ್ಕೆ ಮುತ್ತಿಗೆ ಹಾಕಲ್ಪಟ್ಟಿದ್ದನ್ನು" ಕಂಡಾಗ (ಲೂಕ 21:20), ಅವರು ಅಲ್ಲಿಂದ ಪಲಾಯನ ಮಾಡಿ ಸುರಕ್ಷಿತ ಸ್ಥಳಕ್ಕೆ ಹೋಗಬೇಕಾಗಿತ್ತು (ಮತ್ತಾಯ 24:16; ಮಾರ್ಕ 13:14; ಲೂಕ 21:21). ಕ್ರಿಸ್ತನು ಹೀಗೆ ಹೇಳಿದನು, "ಮಾಳಿಗೆಯ ಮೇಲೆ ಇರುವವನು ತನ್ನ ಮನೆಯೊಳಗಿರುವದನ್ನು ತೆಗೆದುಕೊಳ್ಳುವದಕ್ಕೆ ಇಳಿಯದೆ, ಹೊಲದಲ್ಲಿರುವವನು ತನ್ನ ಹೊದಿಕೆಯನ್ನು ತೆಗೆದುಕೊಳ್ಳುವದಕ್ಕೆ ಹಿಂತಿರುಗಿ ಬಾರದೆ ಓಡಿಹೋಗಲಿ" (ಮತ್ತಾಯ 24:17, 18; ನೋಡಿರಿ ಮಾರ್ಕ 13:15, 16; ಲೂಕ 21:21). ಸರಳವಾಗಿ ಹೇಳುವದಾದರೆ, "ನೀವು ಪಟ್ಟಣದಲ್ಲಿರುವದಾದಲ್ಲಿ, ಚೀಲವನ್ನು ತುಂಬಿಸಿಕೊಳ್ಳಲು ಅಥವಾ ನೆಚ್ಚಿನ ನೆನಪಿನ ವಸ್ತುಗಳನ್ನು ಎಳೆದುಕೊಳ್ಳಬೇಕೆಂದು ನಿಲ್ಲಬೇಡ. ನೀವು ಪಟ್ಟಣದ ಹೊರಗಡೆಯಲ್ಲಿ

ಇರುವದಾದಲ್ಲಿ, ಮನೆಗೆ ಹಿಂದಿರುಗಿ ಹೋಗಬೇಡ. ತಕ್ಷಣವೇ ಯೆರೂಸಲೇಮನ್ನು ಬಿಟ್ಟು ಹೋಗಿರಿ!"

ಯೇಸು ಇನ್ನೂ ಹೇಳಿದ್ದೇನೆಂದರೆ, "ಆದರೆ ಆ ದಿನಗಳಲ್ಲಿ ಬಸುರಿಯರಿಗೂ ಮೊಲೆಕೂಸಿರುವ ಹೆಂಗಸರಿಗೂ ಆಗುವ ಕಷ್ಟವನ್ನು ಏನು ಹೇಳಲಿ" (ಮತ್ತಾಯ 24:19; ನೋಡಿರಿ ಮಾರ್ಕ 13:17; ಲೂಕ 21:23). ಬಸುರಿಯರಿಗೆ ಮತ್ತು ಹಸುಗೂಸುಗಳುಳ್ಳ ತಾಯಂದಿರಿಗೆ ಪ್ರಯಾಣ ಮಾಡುವದು ಕಷ್ಟಕರವಾಗುವದು. ನಿಮಗೆ ಮಕ್ಕಳಿದ್ದರೆ, ಮಕ್ಕಳ ವಿಷಯದಲ್ಲಿ ಎಲ್ಲಿಯೇ ಇದ್ದರೂ - ಸಮಯದ ವಿಷಯವಾಗಿ - ಎಷ್ಟೊಂದು ಕಷ್ಟಕರವಾಗುತ್ತದೆಂಬುದು ನಿಮಗೆ ಗೊತ್ತಿದೆ. ಕ್ರಿಸ್ತನು ಇದನ್ನು ಸಹ ಹೇಳಿದನು, "ಪಲಾಯನವು ಚಳಿಗಾಲದಲ್ಲಿಯಾಗಲಿ ಸಬ್ಬತ್‌ದಿನದಲ್ಲಿಯಾಗಲಿ ಆಗಬಾರದೆಂದು ಪ್ರಾರ್ಥನೆಮಾಡಿರಿ" (ಮತ್ತಾಯ 24:20; ನೋಡಿರಿ ಮಾರ್ಕ 13:18). ಚಳಿಗಾಲದಲ್ಲಿ ಪ್ರಯಾಣ ಕಷ್ಟಕರವಾಗಿರುತ್ತದೆ ಮತ್ತು ಸಬ್ಬತ್ ದಿನದಲ್ಲಿ ಪಟ್ಟಣದ ಬಾಗಿಲುಗಳು ಮುಚ್ಚಲ್ಪಟ್ಟಿರುತ್ತವೆ. ಅಲ್ಲದೆ, ಅನೇಕ ಯೆಹೂದಿ ಕ್ರೈಸ್ತ ಮನಸ್ಸಾಕ್ಷಿಗಳು ಸಬ್ಬತ್ ದಿನದಂದು ಪ್ರಯಾಣಿಸುವದಕ್ಕೆ ಅವರಿಗೆ ಅನುಮತಿನ್ನು ಕೊಡದಿರಬಹುದು. ಸ್ಪಷ್ಟವಾಗಿರುವ ಪ್ರಕಾರ, ಕಾಲದ ವಿಷಯದಲ್ಲಿ ಕ್ರೈಸ್ತರು ಮಾಡಿದ ಪ್ರಾರ್ಥನೆಗಳಿಗೆ ಉತ್ತರ ಸಿಕ್ಕಿತ್ತು, ಯಾಕೆಂದರೆ ರೋಮನ್ನರು ವಸಂತಕಾಲದಲ್ಲಿ ಬಂದಿದ್ದರು.

ಈ ಹಂತದಲ್ಲಿ, ಒಬ್ಬನು ಇರುವಂಥ ಸ್ಥಳವಾಗಲಿ, ಸ್ತ್ರೀಯು ಗರ್ಭಿಣಿಯಾಗಿರಲಿ ಅಥವಾ ಮೊಲೆಯೂನಿಸುತ್ತಿರಲಿ, ಕಾಲವಾಗಲಿ, ಮತ್ತು ವಾರದ ದಿನವಾಗಲಿ ಯಾವದೂ ಎರಡನೆಯ ಬರೋಣದೊಂದಿಗೆ ಸಂಬಂಧ ಹೊಂದಿರುವದಿಲ್ಲ. ಹೇಗೂ, ಯೆರೂಸಲೇಮನ್ನು ಬಿಟ್ಟು ಓಡಿ ಹೋಗುವ ವಿಚಾರಕ್ಕೆ ಬಂದರೆ ಇವುಗಳೆವೂ ಮಹತ್ವಪೂರ್ಣವಾದ ಕಾರಣಾಂಶಗಳಾಗುವವು.

ಮತ್ತಾಯ ಮತ್ತು ಮಾರ್ಕರು ಈ ಹೇಳಿಕೆಗೆ ಒಂದು ಪ್ರೇರಿತವಾದ ಸಂಪಾದಕೀಯವನ್ನು ಸೇರ್ಪಡೆಗೊಳಿಸುತ್ತಾರೆ: "ಇದನ್ನು ಓದುವವನು ತಿಳುಕೊಳ್ಳಲಿ" (ಮತ್ತಾಯ 24:15; ಮಾರ್ಕ 13:14). ಆದಿ ಕ್ರೈಸ್ತರು ಯೇಸುವಿನ ಸಂದೇಶವನ್ನು ಅರ್ಥಮಾಡಿ*ಕೊಂಡರು* ಮತ್ತು ಯೆರೂಸಲೇಮ್ ಪಟ್ಟಣವು ನಾಶಗೊಳಿಸಲ್ಪಡುವ ಮುನ್ನವೇ ಅಲ್ಲಿಂದ ತಪ್ಪಿಸಿಕೊಂಡು ಓಡಲು ಶಕ್ತರಾದರು ಎಂಬುದನ್ನು ನಂತರದ ಇತಿಹಾಸವು ನಮಗೆ ತಿಳಿಸುತ್ತದೆ. ಕೆಲವರು ರೋಮನ್ ಸೈನ್ಯವು ಬರುತ್ತಿದೆ ಎಂದು ಕೇಳಿದಾಗ ಅಥವಾ ಅದು ಬರುವದನ್ನು ದೂರದಲ್ಲಿ ಕಂಡಾಗ ಅಲ್ಲಿಂದ ಹೊರಟು ಹೋಗಿರಬಹುದು. ಇನ್ನು ಕೆಲವರಿಗೆ ಮುತ್ತಿಗೆಯನ್ನು ನಿಲ್ಲಿಸಿದ ವೇಳೆ ಓಡಿ ಹೋಗುವ ಸದವಕಾಶ ಸಿಕ್ಕಿತ್ತು.

> ಕ್ರಿ.ಶ. 300ರಲ್ಲಿ ಜೀವಿಸಿದ್ದ ಸಭಾ ಇತಿಹಾಸಕಾರನಾದ Eusebiusನಿಂದ ಒಂದು ಆಸಕ್ತಿಕರವಾದ ಕಥೆಯು ಹೇಳಲ್ಪಟ್ಟಿತ್ತು. ಯೆರೂಸಲೇಮಿನ ಮುತ್ತಿಗೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದ ಒಂದು ಸಂದರ್ಭವಿತ್ತು. ಚಕ್ರವರ್ತಿಯಾದ Vitelliusನು ಮರಣಿಸಿದ್ದನು, ಮತ್ತು ಯೆರೂಸಲೇಮಿನ ನಾಶನದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ ಸೇನಾಧಿಪತಿಯು Vespasian ಎಂಬವನಾಗಿದ್ದನು. ರೋಮನ್ ಆಡಳಿತ ಪರಿಷತ್ತು ದೇಶಾಧಿಪತಿಯಾಗಿ Vitelliusನ ಸ್ಥಾನವನ್ನು ತೆಗೆದುಕೊಳ್ಳುವಂತೆ Vespasianನಿಗೆ ತಿಳಿಸಲು ವ್ಯಕ್ತಿಗಳನ್ನು ಕಳುಹಿಸಿತ್ತು. Vespasianನು ಅಲ್ಲಿಂದ ಹೊರಟು ಹೋದ ವೇಳೆ, ಆತನ ಮಗನಾದ Titusನಿಗೆ ಮುತ್ತಿಗೆ ಹೊಣೆ ಹೊತ್ತ ಸೇನಾಧಿಪತಿಯಾಗಿ ನೇಮಿಸಲ್ಪಟ್ಟನು. ನಾಯಕತ್ವದ ಬದಲಾವಣೆಯ ವೇಳೆಯಲ್ಲಿ, ಮುತ್ತಿಗೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಯೇಸುವಿನ ಮಾತುಗಳಲ್ಲಿ ತಮ್ಮ ವಿಶ್ವಾಸವನ್ನು ಇಟ್ಟವರಾಗಿದ್ದ ಕ್ರೈಸ್ತರು, ಈ ಸದವಕಾಶವನ್ನು ಬಳಸಿಕೊಂಡು ಯೆರೂಸಲೇಮಿನಿಂದ ತಪ್ಪಿಸಿಕೊಂಡು ಯೋರ್ದಾನ್

ನದಿಯ ಆಚೆಯಲ್ಲಿರುವ ಪೆಲ್ಲಾ ಎಂಬ ಪಟ್ಟಣಕ್ಕೆ ಹೋದರು. ಈ ವಿಧದಲ್ಲಿ, ಅವರು ಭಯಂಕರವಾದ ನಾಶನದಿಂದ ತಪ್ಪಿಸಿಕೊಂಡಿದ್ದರು. Eusebiusನ ಪ್ರಕಾರವಾಗಿ, ಮುತ್ತಿಗೆಯ ವೇಳೆಯಲ್ಲಿ ಒಬ್ಬನೇ ಒಬ್ಬ ಕ್ರೈಸ್ತನಿಗೆ ಗಾಯವಾಗಲಿಲ್ಲ; ಅವರಲ್ಲಿ ಒಬ್ಬನೂ ನಾಶವಾಗಲಿಲ್ಲ.[12]

## ಬರಲಿದ್ದ ಘಟನೆಯ ಸ್ವಭಾವ
## (ಮತ್ತಾಯ 24:21-26, 28; ಮಾರ್ಕ 13:19-23; ಲೂಕ 21:22-24)

ಮತ್ತಾಯ 24ನೇ ಅಧ್ಯಾಯದ ಮುಂದಿನ ವಿಭಾಗವು ಯೆರೂಸಲೇಮಿನ ನಾಶನವನ್ನು ಬಣ್ಣಿಸುತ್ತದೆ. ಅದು ಭಯಂಕರವಾಗಿರಲಿತ್ತೆಂಬುದನ್ನು ಯೇಸುವು ಮುಂದಾಗಿ ಕಂಡಿದ್ದನು:

> ಅಂಥ ಸಂಕಟವು ಲೋಕ ಹುಟ್ಟಿದ್ದು ಮೊದಲುಗೊಂಡು ಇಂದಿನವರೆಗೂ ಆಗಲಿಲ್ಲ. ಇನ್ನು ಮೇಲೆಯೂ ಆಗುವದಿಲ್ಲ. [ಕರ್ತನು] ಆ ದಿನಗಳನ್ನು ಕಡಿಮೆಮಾಡದಿದ್ದರೆ ಒಂದು ನರಪ್ರಾಣಿಯಾದರೂ ಉಳಿಯದು; ಆದರೆ ತಾನು ಆದುಕೊಂಡವರಿಗೋಸ್ಕರ [that is, Christians; ರೋಮಾ 8:32-34] ಆ ದಿನಗಳನ್ನು ಕಡಿಮೆಮಾಡುವನು (ಮತ್ತಾಯ 24:21, 22; ನೋಡಿರಿ ಮಾರ್ಕ 13:19, 20).

ಈ ವಾಕ್ಯಭಾಗ ಮತ್ತು ಪ್ರಕಟನೆ 7:14ರಲ್ಲಿರುವ, "ಮಹಾ ಸಂಕಟ" ಎಂಬ ಪದಗುಚ್ಛವು ಸಹಸ್ರವರ್ಷಪೂರ್ವ ವಾದಿಗಳಿಂದ ಸ್ವಂತ ಮಾಡಿಕೊಳ್ಳಲ್ಪಟ್ಟು ಕ್ರಿಸ್ತನು ಈ ಭೂಮಿಯನ್ನು ಆಳ್ವಿಕೆ ಮಾಡುವದಕ್ಕೆ ಬರುತ್ತಾನೆಂಬ ಕಲ್ಪನಾತ್ಮಕವಾದ ಘಟನೆಗೆ ಸ್ವಲ್ಪ ಕಾಲ ಮುಂಚದೆ ವಿಶ್ವದಲ್ಲೆಲ್ಲಾ ಏಳು-ವರ್ಷಗಳ ಕಾಲ ಸಂಕಟ ಇರುವದೆಂಬ ಕಲ್ಪನಾತ್ಮಕ ಸಮಯವನ್ನು ಸೂಚಿಸುವದಕ್ಕೆ ಬಳಸುತ್ತಾರೆ. ಮತ್ತಾಯ 24ರಲ್ಲಿ, "ಮಹಾ ಸಂಕಟ" ಎಂಬುದು ಕ್ರಿ.ಶ. 70ರಲ್ಲಾದ ಯೆರೂಸಲೇಮಿನ ನಾಶನವೇ ಆಗಿರುತ್ತದೆ.

ಯೆರೂಸಲೇಮಿನ ನಾಶನದ ಸಂಕಟವನ್ನು ಕುರಿತು, ಕರ್ತನು ಹೀಗೆ ಹೇಳಿದನು,

> ಯಾಕಂದರೆ ಬರೆದಿರುವದೆಲ್ಲಾ ನೆರವೇರುವದಕ್ಕಾಗಿ ಅವು ದಂಡನೆಯ ದಿವಸಗಳಾಗಿವೆ [ಅಂದರೆ, ಮೆಸ್ಸೀಯನನ್ನು ತಿರಸ್ಕರಿಸಿದ್ದಕ್ಕಾಗಿ ಬರುವ ದೈವಿಕ ದಂಡನೆ] ... ಈ ಸೀಮೆಯ ಮೇಲೆ ಮಹಾವಿಪತ್ತೂ ಈ ಜನರಿಗೆ ಉಗ್ರದಂಡನೆಯೂ ಆಗುವವು. ಅವರು ಕತ್ತಿಯ ಬಾಯಿಗೆ ಬೀಳುವರು; ಅವರನ್ನು ಅನ್ಯದೇಶಗಳಿಗೆಲ್ಲಾ ಸೆರೆಹಿಡಿದುಕೊಂಡು ಹೋಗುವರು; ಅನ್ಯದೇಶದವರ ಸಮಯಗಳು ಪೂರೈಸುವ ತನಕ ಯೆರೂಸಲೇಮ್ ಪಟ್ಟಣವು ಅನ್ಯದೇಶದವರಿಂದ ತುಳಿದಾಡಲ್ಪಡುತ್ತಿರುವದು (ಲೂಕ 21:22-24).

ಅನೇಕ ಸಹಸ್ರವರ್ಷಪೂರ್ವ ವಾದಿಗಳು "ಅನ್ಯದೇಶದವರ ಸಮಯಗಳು" ಎಂಬ ನಿಗೂಢಾತ್ಮಕ ಪದಗುಚ್ಛವನ್ನು ಅವರ ಅಂತ್ಯಕಾಲಶಾಸ್ತ್ರದ ವೇಳಾಪಟ್ಟಿಯಲ್ಲಿ ಒಂದು ಸಾರಭೂತವಾದ ಭಾಗವಾಗಿ ಬಳಸಿಕೊಳ್ಳುತ್ತಾರೆ, ಆದರೆ ಚರ್ಚೆಯಲ್ಲಿರುವ ವಿಷಯವು ಕ್ರಿ.ಶ. 70ರಲ್ಲಿ ಯೆರೂಸಲೇಮಿನ ನಾಶನದ ಕುರಿತು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ಅನೇಕ ಸಂಭಾವ್ಯ ಅರ್ಥನಿರೂಪಣೆಗಳು ಮುಂದಿಡಲ್ಪಟ್ಟಿವೆ, ಆದರೆ ಅವುಗಳಲ್ಲಿ ಅತ್ಯಂಥ ಸರಳವಾದದ್ದೆಂದರೆ ದೇವರ ಯೋಜನೆಗಳು ಹಾಗೂ ಉದ್ದೇಶಗಳಲ್ಲಿ ಪಟ್ಟಣದ ನಾಶನವನ್ನು ಸಮಯವು ನೆರವೇರಿಸುವ ತನಕ ಯೆರೂಸಲೇಮ ಪಟ್ಟಣವು ಮುತ್ತಿಗೆಯ ವೇಳೆ ರೋಮನ್ನರಿಂದ "ತುಳಿದಾಡಲ್ಪಡುವದು" ಎಂಬದೆ.

ಯೆರೂಸಲೇಮಿನ ನಾಶನ ಘೋರತೆಯ ಕುರಿತು ಕರ್ತನ ಮುಂತಿಳಿಸುವಿಕೆಯು

ಅತಿರೇಕದಂತೆ ತೋರಬಹುದು, ಆದರೆ ವಾಸ್ತವಿಕತೆಯು ಮುಂತಿಳಿಸಲ್ಪಟ್ಟಿದ್ದ ಪ್ರಕಾರವೇ ಇತ್ತೆಂಬುದನ್ನು ಇತಿಹಾಸವು ತಿಳಿಯಪಡಿಸುತ್ತದೆ. ಯೆರೂಸಲೇಮ್ ಪಟ್ಟಣವು ಮುತ್ತಿಗೆಯಲ್ಲಿ ಇತ್ತು, ಮತ್ತು ಸ್ವಲ್ಪ ಕಾಲ ನಿಲ್ಲಿಸಲ್ಪಟ್ಟು ಪುನಃ ಮುತ್ತಿಗೆಗೊಳಗಾಗಿತ್ತು, ಹೀಗೆ ಮೂರು ವರ್ಷಗಳ ವರೆಗೆ ಸಾಗಿತ್ತು. ಮುತ್ತಿಗೆಯು ಸಬ್ಬತ್ ಆಚರಣೆಗೋಸ್ಕರ ಪವಿತ್ರ ಯಾತ್ರಿಗಳು, ಮತ್ತು ಮುನ್ನುಗ್ಗಿ ಬರುತ್ತಿದ್ದ ರೋಮನ್ನರ ಸೈನ್ಯಕ್ಕೆ ತಪ್ಪಿಸಿಕೊಳ್ಳಲು ಇಲ್ಲಿ ಓಡಿ ಬಂದಿದ್ದ ಜನರು ಪಟ್ಟಣದಲ್ಲಿ ತುಂಬಿ ತುಳುಕುವ ವೇಳೆಯಲ್ಲಿ ಆರಂಭಗೊಂಡಿತ್ತು. ಮುತ್ತಿಗೆಯ ವೇಳೆಯಲ್ಲಿ, ಪಟ್ಟಣದೊಳಗೆ ಸಿಕ್ಕಿಕೊಂಡವರು ಬದುಕುಳಿಯುವದಕ್ಕೆ ಹತಾಶೆಯ ಪ್ರಯತ್ನಗಳನ್ನು ಮಾಡಿದ್ದರು. (ಹಳೆಯ ಒಡಂಬಡಿಕೆಯ ಕಾಲಗಳಲ್ಲಾದ ಕ್ಲುಪ್ತ ಮುತ್ತಿಗೆಗಳ ವೇಳೆ ಜನರು ಮಾಡಿದ ಭಯಂಕರವಾದ ಸಂಗತಿಗಳ ಒಂದು ಉದಾಹರಣೆಗೆ 2 ಅರಸು 6:24-30 ನೋಡಿರಿ.)

ಅಂತಿಮವಾಗಿ, ಕ್ರಿ.ಶ. 70ರಲ್ಲಿ, Titusನು ಯೆರೂಸಲೇಮನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದನು. ರೋಮನ್ನರು ಪಟ್ಟಣದ ಮೇಲೆ ದಾಳಿ ಮಾಡಿದಾಗ, ಅವರು ಹತ್ತಾರು ಸಾವಿರಗಟ್ಟಲೆ ಯೆಹೂದ್ಯರನ್ನು ಹತ್ಯೆಗೈದರು. Josephusನ ಪ್ರಕಾರ, 1,100,000 ಜರನು ಮುತ್ತಿಗೆಯ ವೇಳೆ ಸಾವನ್ನಪ್ಪಿದರು, ಮತ್ತು 97,000 ಜನರು ಸೆರೆಯಾಳಾಗಿ ಕೊಂಡೊಯ್ಯಲ್ಪಟ್ಟರು.[13] Josephusನು ಇನ್ನೂ ಹೇಳಿದ್ದೇನೆಂದರೆ ಅನೇಕರನ್ನು ಹಿಂಸಿಸಿ ಕೊಲ್ಲಲಾಯಿತು. "ಕೋಣೆಯಲ್ಲಿ ಶಿಲುಬೆಗಳ ಅಭಾವವಾಗುವ ತನಕ, ಮತ್ತು ದೇಹಗಳಿಗೆ ಶಿಲುಬೆಗಳ ಅಭಾವವಾಗುವ ತನಕ"[14] ಶಿಲುಬೆಗೆ ಹಾಕಲ್ಪಟ್ಟರು. ಈಗಿನ ಕಾಲದ ಪಂಡಿತರು ನಂಬುವದೇನೆಂದರೆ Josephusನು ಉತ್ಪ್ರೇಕ್ಷಿಸಿ ಹೇಳಿರಬಹುದಾಗಿದೆ, ಆದರೆ ಹತ್ತಾರು ಸಾವಿರ ಜನರು ಸತ್ತರು ಎಂಬುದರಲ್ಲಂತೂ ಸಂಶಯವೇ ಇಲ್ಲ ಎಂಬದೆ. "ಪಟ್ಟಣದಲ್ಲಿ ಅಥವಾ ಅದರ ಸುತ್ತಮುತ್ತಲಿನಲ್ಲಿ ಯಾವನೊಬ್ಬನು ಜೀವಂತವಾಗಿ ಉಳಿದುಕೊಳ್ಳುವಂತಾಗದ ಹಾಗೆ"[15] ಇನ್ನೂ ಸಾವಿರಾರು ಜನರನ್ನು ಸೆರೆಯಾಳುಗಳಾಗಿ ತೆಗೆದುಕೊಂಡು ಹೋಗಲಾಯಿತು.

ರೋಮನ್ನರು ದೇವಾಲಯದ ಗೋಡೆಯನ್ನು ಸೇರಿದಂತೆ, ಪಟ್ಟಣವನ್ನು ಒಡೆದು ಹಾಕಿದರು, ಮತ್ತು ಅದನ್ನು ಸುಟ್ಟು ಬಿಟ್ಟರು (ನೋಡಿರಿ ಮತ್ತಾಯ 22:7). ಬೆಂಕಿಯು ದೇವಾಲಯದಲ್ಲಿದ್ದ ಬಂಗಾರವನ್ನು ಕರಗಿಸಿದ್ದರಿಂದ ಸೈನಿಕರು ಕಲ್ಲುಗಳಲ್ಲಿ ಸಿಕ್ಕಿಕೊಂಡಿದ್ದ ಚಿನ್ನವನ್ನು ತೆಗೆದುಕೊಳ್ಳುವ ಪ್ರಯತ್ನದಲ್ಲಿ "ಯಾವ ಕಲ್ಲನ್ನೂ ಕಿತ್ತು ಹಾಕದೆ ಬಿಡಲಿಲ್ಲ." ಯೇಸುವು "ಇಲ್ಲಿ ಕಲ್ಲಿನ ಮೇಲೆ ಕಲ್ಲು ಉಳಿಯು[ವದಿಲ್ಲ], ಎಲ್ಲಾ ಕೆಡವಲ್ಪಡುವದು" ಎಂದು ಹೇಳಿದ್ದನು (ಮತ್ತಾಯ 24:2). "ಮಹತ್ವಪೂರ್ಣವಾಗಿ, ಆ ದೇವಾಲಯಕ್ಕೆ ಸೇರಿದ ಒಂದೇ ಕಲ್ಲನ್ನು, ಮತ್ತು ಮತ್ತೊಂದರ ತುಂಡುಗಳನ್ನು ಮಾತ್ರವೇ ಪ್ರಾಕ್ತನಶಾಸ್ತ್ರಜ್ಞರು ಸಕಾರಾತ್ಮಕವಾಗಿ ಗುರುತು ಹಿಡಿದಿರುತ್ತಾರೆ."[16] ಯೆರೂಸಲೇಮಿನ ನಾಶನವು ಎಷ್ಟೊಂದು ಸಂಪೂರ್ಣವಾದದ್ದಾಗಿತ್ತೆಂದರೆ ಅನಂತರದಲ್ಲಿ ಅಲ್ಲಿಗೆ ಭೇಟಿ ಕೊಟ್ಟವರು ಆ ಪಟ್ಟಣದಲ್ಲಿ ಹಿಂದೆ ಎಂದಾದರೂ ಜನರು ವಾಸಿಸಿದ್ದರೆಂಬುದನ್ನು ನಂಬುವದಕ್ಕೇ ಆಗಲಿಲ್ಲ. ಕ್ರಿಸ್ತನ ಕಾಲದ ಯೆರೂಸಲೇಮಿನ ಕೆಲವೇ ಗೋಡೆಗಳು ಮಾತ್ರ ಉಳಿದುಕೊಂಡಿದ್ದವು, ಅದರಲ್ಲಿ ಪ್ರಸಿದ್ಧವಾದ "ಗೋಳಾಡುವ ಗೋಡೆ" ಸಹ ಸೇರಿತ್ತು. ಈಗ ಯೆಹೂದಿ ದೇವಾಲಯವಿದ್ದ ಜಾಗದಲ್ಲಿ "ಡೊಮ್ ಆಫ್ ರಾಕ್" ಎಂದು ಕರೆಯಲ್ಪಡುವ ಮಸೀದಿಯೊಂದು ಕಟ್ಟಲ್ಪಟ್ಟಿರುತ್ತದೆ.

ಯೇಸು ಅದನ್ನು ಎದುರುನೋಡಿದ್ದನು, ದುರಂತದ ನಡುವೆಯೇ, ನಕಲಿ ಕ್ರಿಸ್ತರು ಎದ್ದು ಸುಳ್ಳು ನಿರೀಕ್ಷೆಯನ್ನು ಕೊಡುವರು ಎಂಬದೆ (ಮತ್ತಾಯ 24:23-25; ಮಾರ್ಕ 13:21-23).

ಮತ್ತಾಯ 24:24 ಗಮನಿಸಲು ಯೋಗ್ಯವಾಗಿದೆ: ಅಲ್ಲಿ ಕರ್ತನು ಹೇಳಿದ್ದೇನೆಂದರೆ ಸುಳ್ಳು ಕ್ರಿಸ್ತರು ಎದ್ದು "ಸಾಧ್ಯವಾದರೆ ದೇವರಾದುಕೊಂಡವರನ್ನು [ಅಂದರೆ, ಕ್ರೈಸ್ತರನ್ನು] ಸಹ ಮೋಸಗೊಳಿಸುವದಕ್ಕೋಸ್ಕರ ದೊಡ್ಡ ದೊಡ್ಡ ಸೂಚಕಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ಮಾಡಿ ತೋರಿಸುವರು." "ಅದ್ಭುತಕಾರ್ಯಗಳನ್ನು ಮಾಡುವಂತೆ" ತೋರುವ ಸಾಮರ್ಥ್ಯವೊಂದೇ ಸ್ವತಃ, ಒಬ್ಬ ವ್ಯಕ್ತಿಯು ದೇವರಿಂದ-ಅನುಮೋದಿಸಲ್ಪಟ್ಟವನು ಎಂಬುದಕ್ಕೆ ಒಂದು ಸೂಚನೆಯಾಗಿ ಎಂದಿಗೂ ಇರುವದೇ ಇಲ್ಲ.

ಜನರು ವದಂತಿಗಳನ್ನು ಹಬ್ಬಿಸುವರು ಎಂದು ಹೇಳಿದನು - "ಕ್ರಿಸ್ತನು ಇಲ್ಲಿದ್ದಾನೆ" ಅಥವಾ "ಕ್ರಿಸ್ತನು ಅಲ್ಲಿದ್ದಾನೆ" - ಆದರೆ "ಅವರನ್ನು ನಂಬಬೇಡಿರಿ" ಎಂದು ಆತನು ಹೇಳಿದನು (ಮತ್ತಾಯ 24:26). ಕೊನೆಗೂ ಯೇಸುವು ಹಿಂದಿರುಗಿ ಬರುವ ವೇಳೆ, ಆತನ ಬರೋಣವನ್ನು ಯಾರೊಬ್ಬರೂ ಘೋಷಿಸಬೇಕಾಗುವದಿಲ್ಲ: "ಹೇಗೆ ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾಣಿಸುತ್ತದೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯು ಇರುವದು" (ಮತ್ತಾಯ 24:27). ಮತ್ತಾಯ 24:27ನೇ ವಚನವು ಕ್ರಿಸ್ತನು ಯೆರೂಸಲೇಮಿನ ಮೇಲೆ ನ್ಯಾಯತೀರಿಸುವವನಾಗಿ ಬರುವದನ್ನು ಮಾತಾಡುತ್ತಿರಬಹುದಾಗಿದೆ, ಆದರೆ ಸನ್ನಿವೇಶದಲ್ಲಿ, ಅದು ಆತನು ಸ್ವತಃ ಬರುವದನ್ನು ಸೂಚಿಸುತ್ತಿರಬಹುದಾಗಿದೆ - ಅಂದರೆ, ಎರಡನೆಯ ಬರೋಣವನ್ನು ಸೂಚಿಸುತ್ತಿರಬಹುದು. ಯೇಸುವು ನಿರಾಧಾರವಾದ "ಅಲ್ಲಿದ್ದಾನೆ" ಅಥವಾ "ಇಲ್ಲಿದ್ದಾನೆ" ಎಂಬುದರ ವಿರುದ್ಧವಾಗಿ ಹೋಲಿಕೆ ಮಾಡುವವನಾಗಿ, ಅದು ಸಂಭವಿಸುವ ವೇಳೆ, ಎರಡನೆಯ ಬರೋಣವು ಎಲ್ಲರಿಗೂ ಸ್ಪಷ್ಟವಾಗಿ ಗೊತ್ತಾಗುವುದು ಎಂದು ಹೇಳುತ್ತಿದ್ದಾನೆಂದು ತೋರುತ್ತದೆ (ನೋಡಿರಿ ಪ್ರಕಟನೆ 1:7).

ನಕಲಿ ಕ್ರಿಸ್ತರಿಂದ ಕೊಡಲ್ಪಡುವ ಯಾವದೇ ನಿರೀಕ್ಷೆಯು ಸುಳ್ಳು ನಿರೀಕ್ಷೆಯಾಗಿರಲಿತ್ತು ಯಾಕೆಂದರೆ ಯೆರೂಸಲೇಮಿನ ಗತಿಯು ಈಗಾಗಲೇ ನಿರ್ಧರಿಸಲ್ಪಟ್ಟಿತ್ತು. ಸುವಾರ್ತೆಯು ಮೊದಲು ಯೆಹೂದ್ಯರಿಗೆ ಸಾರಲ್ಪಡಲಿತ್ತು (ರೋಮಾ 1:16); ದೇವರ ಕಡೆಗೆ ಹಿಂದಿರುಗುವಂತೆ ಯೆಹೂದಿ ಜನಾಂಗಕ್ಕೆ ಎಲ್ಲಾ ಸದವಕಾಶವನ್ನೂ ಕೊಡಲಾಗಲಿತ್ತು; ಆದರೆ ದೇವರು ತೋರಿಸುವ ಕರುಣೆಯ ಪ್ರಸ್ತಾಪಗಳು ತಿರಸ್ಕರಿಸಲ್ಪಡಲಿದ್ದವು. ದೇವರ ಸಂಗಡ ಆ ಜನಾಂಗಕ್ಕಿದ್ದ ಸಂಬಂಧವು ಅಂತ್ಯಗೊಂಡಿದೆ ಎಂಬುದಕ್ಕೆ ಯೆರೂಸಲೇಮಿನ ನಾಶನವು ಒಂದು ಪುರಾವೆಯಾಗಲಿತ್ತು. ಭವಿಷ್ಯವನ್ನು ಮುಂದಾಗಿ ಕಾಣುವವನಾಗಿ, ರೋಗಿಯು ಮೃತಪಟ್ಟಿದ್ದಾನೆ ಎಂಬುದಾಗಿ ಮಹಾ ವೈದ್ಯನು ಘೋಷಿಸುತ್ತಾ, ಹೀಗೆ ಹೇಳಿದನು, "ಹೆಣ ಬಿದ್ದಲ್ಲಿ ಹದ್ದುಗಳು ಕೂಡುವವು" (ಮತ್ತಾಯ 24:28).

ಹದ್ದುಗಳು ಕೂಡುವವು ಎಂಬುದಾಗಿ ಯೇಸುವು ಹೇಳಿದ್ದು ಅಕ್ಷರಶಃ ನೆರವೇರಿತ್ತು. ರೋಮನ್ನರು ಮುತ್ತಿಗೆ ಹಾಕಿದ್ದ ವೇಳೆಯಲ್ಲಿ ಫಿಲಿಷ್ಟಿಯದಲ್ಲಿ ಹದ್ದುಗಳ ಸಂಖ್ಯೆಯು ಇಮ್ಮಡಿಗೊಂಡಿತ್ತೆಂದು ಹೇಳಲಾಗುತ್ತದೆ. ಹೇಗೂ, "ಹದ್ದುಗಳು" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದ ἀετοί (*aetoi*) ಎಂಬುದು, "ಗರುಡಗಳು" ಎಂದು ಸಹ ಅನುವಾದಿಸಲ್ಪಡಬಹುದಾಗಿದೆ ಎಂದು ಕೆಲವರು ಗಮನಕ್ಕೆ ತರುತ್ತಾರೆ. ಕರ್ತನು ರೋಮನ್ನರ ಪತಾಕೆಗಳ ಮೇಲೆ ಇರುತ್ತಿದ್ದ ಗರುಡ ಲಾಂಛನವನ್ನು ಸೂಚಿಸಿ ಹೇಳಿದ್ದನೆಂದು ಅವರು ಯೋಚಿಸುತ್ತಾರೆ: ರೋಮನ್ ಸೈನ್ಯವು "ಹೆಣ" ಇರುವಲ್ಲಿ (ಯೆರೂಸಲೇಮ್) ಕೂಡಿದರು.

## ಅದಾದ ಕೂಡಲೆ ಸಂಭವಿಸಬೇಕಾಗಿದ್ದ ಕಣ್ಸೆಳೆಯುವ ಘಟನೆಗಳು (ಮತ್ತಾಯ 24:29-31; ಮಾರ್ಕ 13:24-27; ಲೂಕ 21:25-28)

ಈಗ ನಾವು ಒಂದು ಕಠಿಣ ಅಧ್ಯಾಯದಲ್ಲಿನ ಅತ್ಯಂಥ ಕಠಿಣವಾದ ವಿಭಾಗಗಳಲ್ಲಿ

ಒಂದಾಗಿರುವ ವಿಭಾಗದ ಕಡೆಗೆ ಗಮನವನ್ನು ತಿರುಗಿಸುತ್ತೇವೆ:

> "ಆ ದಿನಗಳ ಸಂಕಟವು ತೀರಿದಕೂಡಲೆ ಸೂರ್ಯನು ಕತ್ತಲಾಗಿಹೋಗುವನು, ಚಂದ್ರನು ಬೆಳಕುಕೊಡದೆ ಇರುವನು, ನಕ್ಷತ್ರಗಳು ಆಕಾಶದಿಂದ ಉದುರುವವು, ಆಕಾಶದ ಶಕ್ತಿಗಳು ಕದಲುವವು. ಆಗ ಮನುಷ್ಯಕುಮಾರನನ್ನು ಸೂಚಿಸುವ ಗುರುತು ಆಕಾಶದಲ್ಲಿ ಕಾಣಬರುವದು. ಆಗ ಭೂಲೋಕದಲ್ಲಿರುವ ಎಲ್ಲಾ ಕುಲದವರು ಎದೆಬಡಕೊಳ್ಳುವರು, ಮತ್ತು ಮನುಷ್ಯಕುಮಾರನು ಬಲದಿಂದಲೂ ಬಹು ಮಹಿಮೆಯಿಂದಲೂ ಆಕಾಶದ ಮೇಘಗಳ ಮೇಲೆ ಬರುವದನ್ನು ಕಾಣುವರು. ಮತ್ತು ಆತನು ತುತೂರಿಯ ಮಹಾ ಶಬ್ದದಿಂದ ತನ್ನ ದೂತರನ್ನು ಕಳುಹಿಸುವನು. ಅವರು ಆತನು ಆದುಕೊಂಡವರನ್ನು ಆಕಾಶದ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೆ ನಾಲ್ಕೂ ದಿಕ್ಕುಗಳಿಂದ ಒಟ್ಟುಗೂಡಿಸುವರು" (ಮತ್ತಾಯ 24:29-31; ನೋಡಿರಿ ಮಾರ್ಕ 13:24-27; ಲೂಕ 21:25-28).

ಈ ವಚನಗಳಲ್ಲಿನ ಪರಿಭಾಷೆಯು ಎರಡನೆಯ ಬರೋಣದಂತೆ ಅನ್ನಿಸುವದಿಲ್ಲ. ಅನೇಕರು ನಂಬುವ ಪ್ರಕಾರ, ಯೇಸುವು ತನ್ನ ಪ್ರವಚನದಲ್ಲಿ ಒಂದು ಚರ್ಚೆಯಾಂಶದಿಂದ ಇನ್ನೊಂದು ಚರ್ಚೆಯಾಂಶಕ್ಕೆ ಜಿಗಿದದ್ದಾಗಿದ್ದಲ್ಲಿ, ಬಹುಶಃ ಆತನು ಆ ಘಟನೆಯನ್ನು ಸೂಚಿಸಿ ಹೇಳುತ್ತಿದ್ದಾನೆಂದಾಗುತ್ತದೆ. ಹೇಗೂ, 34ನೇ ವಚನದಲ್ಲಿನ "ಇದೆಲ್ಲಾ" ಎಂಬ ಪದಗುಚ್ಛವು 29ರಿಂದ 31 ವಚನಗಳಲ್ಲಿರುವದನ್ನೆಲ್ಲಾ ಒಳಗೊಂಡಿರುವದಾದಲ್ಲಿ, ಹಾಗೆ ಭಾವಿಸಿಕೊಳ್ಳುವದು ಸ್ವಾಭಾವಿಕವಾದದ್ದೇ ಆಗಿದ್ದು, ಅದು ಕ್ರಿಸ್ತನು ಮನಸ್ಸಿನಲ್ಲಿ ಬೇರೊಂದು ಘಟನೆಯನ್ನಿಟ್ಟುಕೊಂಡು ಹೇಳಿದನೆಂದಾಗುತ್ತದೆ.

ನಾವು ಇತರ ಸಾಧ್ಯತೆಗಳನ್ನು ಹುಡುಕುತ್ತಿರುವ ವೇಳೆ, ಯೇಸುವಿನ ಯೆಹೂದಿ ಶ್ರೋತೃಗಳು ಅಂತ್ಯಕಾಲಿಕ ಭಾಷೆಯೊಂದಿಗೆ ಪರಿಚಿತರಾಗಿದ್ದರೆಂಬುದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳುವ ಅಗತ್ಯವಿದೆ. ಮತ್ತಾಯ 24:29-31ರಲ್ಲಿ ಬಳಸಲಾಗಿರುವ ಎಲ್ಲಾ ಪದಗಳು ಮತ್ತು ಅದಕ್ಕೆ ಸಂಬಂಧಿಸಿದಂತೆ ಬೈಬಲಿನೊಳಗೆ ಬೇರೆ ಕಡೆಗಳಲ್ಲಿ ಬಳಸಲ್ಪಟ್ಟಿರುವ ವಾಕ್ಯಭಾಗಗಳು, ಇಂದು ಜನರು ಸ್ಮರಣಾರ್ಥಕ ಸಂದರ್ಭಗಳನ್ನು ಸೂಚಿಸುವದಕ್ಕೆ ಬಳಸುವ "ಭೂಮಿ-ನಡುಗಿಸುವಂಥದ್ದು" ಎಂಬ ಮಾತಿನಂತೆಯೇ, ಅವುಗಳು ವಿನಾಶಕಾರಿ ಘಟನೆಗಳನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿದ್ದವು.

ಉದಾಹರಣೆಗೆ, ಸೂರ್ಯ, ಚಂದ್ರ, ಮತ್ತು ನಕ್ಷತ್ರಗಳ ಸಾಂಕೇಕತೆಯು ರಾಜರ ಹಾಗೂ ರಾಜ್ಯಗಳ ಬೀಳುವಿಕೆಯನ್ನು ಸೂಚಿಸುವದಕ್ಕೆ ಬಳಸಲಾಗಿರುತ್ತದೆ: (1) ಈ ರೀತಿಯ ಪರಿಭಾಷೆಯು ಬಾಬೆಲಿನ ಬೀಳುವಿಕೆಯನ್ನು ಸೂಚಿಸುವದಕ್ಕೆ ಬಳಸಲಾಯಿತು (ಯೆಶಾಯ 13:1, 9-11). (2) ಎದೋಮಿನ ಬೀಳುವಿಕೆಯನ್ನು ಮುಂತಿಳಿಸುವದಕ್ಕೆ ಅದು ಬಳಸಲ್ಪಟ್ಟಿತು (ಯೆಶಾಯ 34:4, 5). (3) ಅದು ಫರೋಹನ. ಅಂದರೆ ಐಗುಪ್ತದ ಪದಚ್ಯುತಿಯನ್ನು ಕುರಿತು ಬಳಸಲ್ಪಟ್ಟಿತ್ತು (ಯೆಹೆಜ್ಕೇಲ 32:2. 7, 8). (4) ಈ ಪರಿಭಾಷೆಯು ಯೋವೇಲ 2:28-32ರಲ್ಲಿ ಸಹ ಬಳಸಲ್ಪಟ್ಟಿತು, ಅದು ಅಪೊಸ್ತಲರ ಕೃತ್ಯಗಳು 2:16-21ರಲ್ಲಿ ಉಲ್ಲೇಖಿಸಲ್ಪಟ್ಟಿದೆ, ಅಲ್ಲಿ ಅದು ಹೊಸ ಒಡಂಬಡಿಕೆಯ ಆರಂಭದೊಂದಿಗೆ ಜೋಡಿಸಲ್ಪಟ್ಟಿದೆ.

ಪುನಃ, "ಕರ್ತನ ಬರೋಣ" (ಅಥವಾ ಅದೇ ರೀತಿಯ ಪದಗುಚ್ಛವು) ಮನುಷ್ಯರೊಳಗೆ ಕರ್ತನು ತನ್ನ ಉದ್ದೇಶವನ್ನು ನೆರವೇರಿಸುವದನ್ನು ಸೂಚಿಸಬಲ್ಲದು: (1) ದೇವರು ಐಗುಪ್ತವನ್ನು ನಾಶಗೊಳಿಸಲು ಇಳಿದು "ಬಂದನು" (ಯೆಶಾಯ 19:1). (2) ಯೇಸುವು ತನ್ನ ರಾಜ್ಯ/ಸಭೆಯನ್ನು ಸ್ಥಾಪಿಸುವದಕ್ಕೆ "ಬರುವೆನು" ಎಂದು ವಾಗ್ದಾನ ಮಾಡಿದನು - ಅದು ಆತನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳ ನಂತರದಲ್ಲಿ ಪಂಚಾಶತ್ತಮ ದಿನದಂದು

ಸಂಭವಿಸಿತು (ಅಪೊಸ್ತಲರ ಕೃತ್ಯಗಳು 2). (ಮತ್ತಾಯ 16:28ನ್ನು ಮಾರ್ಕ 9:1ರೊಂದಿಗೆ ಹೋಲಿಸಿರಿ.)

ನಾವು ಮತ್ತಾಯ 24:29-31ನ್ನು ಅರ್ಥನಿರೂಪಣೆ ಮಾಡುವ ವೇಳೆ, ನಾವು ಕನಿಷ್ಠ ಮೂರು ವಾಸ್ತವಾಂಶಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು: (1) 29ರಿಂದ 31 ವಚನಗಳಲ್ಲಿನ ಘಟನೆಗಳು ಯೆರೂಸಲೇಮಿನ ನಾಶನದ "ಸಂಕಟ ತೀರಿದ *ಕೂಡಲೆ*" ಸಂಭವಿಸಲಿದ್ದವು ಎಂದು ಯೇಸು ಹೇಳಿದನು (ವ. 29; ಒತ್ತಿ ಹೇಳಿದ್ದು ನನ್ನದು). 34ನೇ ವಚನವು ಆ ಘಟನೆ ಅಥವಾ ಘಟನೆಗಳು ಆಗ ಜೀವಿಸುತ್ತಿದ್ದ ಸಂತತಿಯ ಜೀವಿತಕಾಲದಲ್ಲಿ ಸಂಭವಿಸುವವೆಂದು ಸೂಚಿಸುತ್ತದೆ. (3) 29ರಿಂದ 31 ವಚನಗಳಲ್ಲಿನ ಪರಿಭಾಷೆಯು ಎರಡನೆಯ ಬರೋಣವನ್ನು ಬಿಟ್ಟು ಬೇರೆ ಘಟನೆಗಳನ್ನು ಸೂಚಿಸುತ್ತಿರ*ಬಹುದಾಗಿದೆ.* ಇದೆಲ್ಲವನ್ನು ಮನಸ್ಸಿನಲ್ಲಿಟ್ಟುಕೊಂಡು, ಮತ್ತಾಯ 24:29-31ರ ತಾರ್ಕಿಕವಾದ ಅರ್ಥನಿರೂಪಣೆಯನ್ನು ಈಗ ನಾವು ನೋಡಬಹುದು:

*ವಚನ 29.* ಯೆರೂಸಲೇಮು ಮತ್ತು ದೇವಾಲಯಗಳು ನಾಶಗೊಳಿಸಲ್ಪಟ್ಟಾಗ, ಇದು ಯೆಹೂದಿ ಜನಾಂಗದ ಬೀಳುವಿಕೆಗೆ ಎಚ್ಚರಿಕೆ ಗಂಟೆಯಾಗಿತ್ತು.

*ವಚನ 30.* "ಮನುಷ್ಯಕುಮಾರನನ್ನು ಸೂಚಿಸುವ ಗುರುತು" ದೇವಾಲಯದ ನಾಶನವೇ ಆಗಿತ್ತು. ಅದು "ಆಕಾಶದಲ್ಲಿ ಕಾಣಬರುವದು" ಎಂಬುದಾಗಿ ಹೇಳಲ್ಪಟ್ಟಿದೆ ಯಾಕೆಂದರೆ ಅದು ಎಲ್ಲರೂ ಕಾಣಬಹುದಾಗಿದ್ದ ದೇವರಿಂದ ಬಂದಂಥ ಒಂದು ಗುರುತು ಆಗಿತ್ತು. ಯೆರೂಸಲೇಮಿನ ನಾಶನವು ಕರ್ತನು ನುಡಿದ ಅತ್ಯಂಥ ಕಣ್ಸೆಳೆಯುವ ಮುಂತಿಳಿಸುವಿಕೆಗಳಲ್ಲೊಂದಾಗಿತ್ತು - ಮತ್ತು ಆತನ ಶ್ರೋತೃಗಳ ಅದರ ನೆರವೇರಿಕೆಯನ್ನು ನೋಡಲಿದ್ದ ಮುಂತಿಳಿಸುವಿಕೆ ಆಗಿತ್ತು. ದೇವಾಲಯವು ಸಂಪೂರ್ಣ ನಾಶನಗೊಂಡಿದ್ದು ಯೇಸುವು ತಿಳಿಸಿದ ಪ್ರವಾದನೆಯು ನೆರವೇರಲ್ಪಟ್ಟಿದೆ ಮತ್ತು ಆತನನ್ನು ವಿಶ್ವಾಸಿಬಹುದಾಗಿದೆ ಎಂಬುದನ್ನು ತೋರಿಸಿ ಕೊಟ್ಟಿತ್ತು. ಆತನು ಮೆಸ್ಸೀಯನು ಮತ್ತು ಆತನನ್ನು ನಂಬತಕ್ಕದ್ದು ಮತ್ತು ಆತನಿಗೆ ವಿಧೇಯರಾಗತಕ್ಕದ್ದು ಎಂಬುದಕ್ಕೆ ಅದೊಂದು "ಗುರುತು" ಆಗಿತ್ತು.

*ವಚನ 30.* ಯೆರೂಸಲೇಮ್ ಪಟ್ಟಣವು ನಾಶಗೊಳಿಸಲ್ಪಟ್ಟಾಗ, ಭೂಲೋಕದ ಕುಲದವರು (ಅಂದರೆ, ಇಸ್ರಾಯೇಲ್ಯರು) ಎದೆಬಡಕೊಳ್ಳುವರು.

*ವಚನ 30.* ಆ ಹಂತದಲ್ಲಿ, ಮನುಷ್ಯಕುಮಾರನು "ಬರುವ"ದಕ್ಕಾಗಿ - ಅಂದರೆ, ಲೋಕದ ರಕ್ಷಣೆಗೋಸ್ಕರ ತನ್ನ ಯೋಜನೆಯನ್ನು ಮುಂದುವರೆಸುವದಕ್ಕೆ - ಎಲ್ಲವೂ ಸಿದ್ಧವಾಗಿರುವದು. ಹೀಗಿರುವದರಿಂದ ಯೇಸುವು "ಆದರೆ ಇವು ಸಂಭವಿಸುವದಕ್ಕೆ ತೊಡಗುವಾಗ ... ನಿಮ್ಮ ಬಿಡುಗಡೆಯು ಸಮೀಪವಾಗಿದೆ" ಎಂದು ಹೇಳಿದನು (ಲೂಕ 21:28).

*ವಚನ 31.* ಇಲ್ಲಿಯ ವರೆಗಿನ ನಮ್ಮ ಅರ್ಥನಿರೂಪಣೆಯು ಸರಿಯಾಗಿ ಇರುವದಾದರೆ, 31ನೇ ವಚನವು ಆತನ ಹಿಂಬಾಲಕರು ಮಹಾ ಆದೇಶವನ್ನು ಜಾರಿಗೆ ತರುವ, ಸುವಾರ್ತೆಯನ್ನು ಭೂಲೋಕದ ಎಲ್ಲಾ ಕಡೆಗೂ ಕೊಂಡೊಯ್ಯುವದರ ಕುರಿತಾಗಿ ಒಂದು ಸಾಂಕೇತಿಕವಾದ ಮುಂತಿಳಿಸುವಿಕೆ ಆಗಿರಬಹುದಾಗಿದೆ. "ದೇವದೂತ" ಎಂಬುದಕ್ಕೆ ಗ್ರೀಕ್ ಪದವು (ἄγγελος, *angelos*) ಎಂದಾಗಿದ್ದು ಅದು "ಸಂದೇಶಕ" ಎಂದರ್ಥವಾಗಿದೆ, ಅದು ಮಾನವ ಸಂದೇಶಕವಾಗಿರಬಹುದು ಅಥವಾ ದೇವದೂತನಾದ ಸಂದೇಶಕನಾಗಿರಬಹುದು. 31ನೇ ವಚನದ ದೇವದೂತರು ಮಾನವ ಸಂದೇಶಕರಾಗಿದ್ದಲ್ಲಿ, ವಚನವು ಲೋಕದಲ್ಲೆಲ್ಲಾ ಸಂಚರಿ, "ಆದುಕೊಂಡವರನ್ನು" (ಸುವಾರ್ತೆಗೆ ಕಿವಿಗೊಡುವವರನ್ನು) ಒಟ್ಟಗೂಡಿಸುವ ಸುವಾರ್ತಾಸೇವಕರನ್ನು ಸೂಚಿಸುತ್ತಿರಬಹುದಾಗಿದೆ.

ನೀವು ಈ ಅರ್ಥೈಸುವ ದಾರಿಯ ಬಗ್ಗೆ ಮೊದಲ ಸಾರಿ ಓದಿದಾಗ, ಅದು ನಿಮ್ಮ

ಮನಸ್ಸಿಗೆ ಹಿಡಿಸಬಹುದು ಅಥವಾ ಹಿಡಿಸದೆ ಇರಬಹುದು; ಆದರೆ ಅದನ್ನು ತಿರಸ್ಕರಿಸುವ ಮುನ್ನ, ಎರಡು ಎದ್ದುಕಾಣುವ ಅಂಶಗಳನ್ನು ಪರಿಗಣಿಸಿರಿ: (1) ಅರ್ಥನಿರೂಪಣೆಯು ಒಂದು ನಿರ್ದಿಷ್ಟವಾದ ವಚನವು ಯೆರೂಸಲೇಮಿನ ನಾಶನವನ್ನು ಸೂಚಿಸುತ್ತಿದೆಯೋ ಅಥವಾ ಎರಡನೆಯ ಬರೋಣದ ಕುರಿತು ಸೂಚಿಸುತ್ತಿದೆಯೋ ಎಂದು ವಾಚಕನಿಗೆ ಇಷ್ಟಬಂದ ಹಾಗೆ ನಿರ್ಧಿಸುವ ಸ್ವಾತಂತ್ರ್ಯ ನೀಡುವ ಆರಿಸಿ-ಆಯ್ದುಕೊಳ್ಳುವ ಅರ್ಥೈಸುವ ದಾರಿಗಳಲ್ಲಿರುವ ಕೆಲವೊಂದು ಪ್ರಲೋಭನೆಗಳಿಂದ ದೂರವಿರುತ್ತದೆ. (2) ಈ ಅರ್ಥೈಸುವ ದಾರಿಯು ಶಾಸ್ತ್ರದೊಳಗೆ ಬೇರೆ ಕಡೆಗಳಲ್ಲಿರುವ ಅಂತ್ಯಕಾಲಿಕ ಸಾಂಕೇತಿಕತೆಯ ಬಳಕೆ ಮತ್ತು ಚರ್ಚೆಯಲ್ಲಿರುವ ವಿಷಯದ ಕುರಿತು ಹೊಸ ಒಡಂಬಡಿಕೆಯಲ್ಲೆಲ್ಲಾ ಇರುವ ಸ್ಪಷ್ಟವಾದ ಉಪದೇಶ ಎರಡರೊಂದಿಗೂ ಸಾಮಂಜಸ್ಯತೆಯನ್ನು ಹೊಂದಿರುತ್ತದೆ.

## “ಇದೆಲ್ಲಾ ಆಗುವ ತನಕ ಈ ಸಂತತಿಯು ಅಳಿದು ಹೋಗುವದಿಲ್ಲ ...” (ಮತ್ತಾಯ 24:32-35)

ಯೇಸುವು ಯೆರೂಸಲೇಮಿನ ನಾಶನದ ಕುರಿತು ತನ್ನ ಉಪದೇಶವನ್ನು ಮುಕ್ತಾಯಗೊಳಿಸುತ್ತಿದ್ದ ವೇಳೆ, “ಆತನು ಅವರಿಗೆ ಒಂದು ಸಾಮ್ಯ ಕೊಟ್ಟು ಹೇಳಿದನು” (ಲೂಕ 21:29), “ಅಂಜೂರದ ಮರದ ದೃಷ್ಟಾಂತ” (ಮತ್ತಾಯ 24:32, 33; ಮಾರ್ಕ 13:28, 29; ಲೂಕ 21:29–31). ಮತ್ತಾಯ 24:33 ಮತ್ತು ಮಾರ್ಕ 13:29ರಲ್ಲಿನ “ಇದೆಲ್ಲಾ” ಎಂಬುದು ಯೇಸುವು, “ಹಾಳುಮಾಡುವ ಅಸಹ್ಯವಸ್ತು” (ಮತ್ತಾಯ 24:15; ಮಾರ್ಕ 13:14) – ಅಂದರೆ, “ದಂಡುಗಳು ಯೆರೂಸಲೇಮ್ ಪಟ್ಟಣಕ್ಕೆ ಮುತ್ತಿಗೆ ಹಾಕಿರುವದು” (ಲೂಕ 21:20) – ಎಂಬುದರ ಮೇಲೆ ವಿಶೇಶ ಒತ್ತು ಕೊಟ್ಟು ಹೇಳಿದ ಎಲ್ಲವನ್ನೂ ಸೂಚಿಸುತ್ತದೆ. ಕ್ರಿಸ್ತನ ಶ್ರೋತೃಗಳು ಅಂಜೂರದ ಮರದಲ್ಲಿ ಎಲೆಗಳನ್ನು ಕಂಡು ಬೇಸಿಗೆಯು ಹತ್ತಿರವಾಗಿದೆ ಎಂಬುದನ್ನು ತಿಳಿದುಕೊಳ್ಳಲು ಶಕ್ತರಾಗಿದ್ದ ಪ್ರಕಾರವೇ, ರೋಮನ್ ಸೈನ್ಯವು ಬರುವದನ್ನು ಕಂಡಾಗ ಯೆರೂಸಲೇಮಿನ ನಾಶನವು ಸಮೀಪವಾಗಿದೆ ಎಂಬುದನ್ನು ತಿಳಿದುಕೊಳ್ಳಬಹುದಿತ್ತು.

ಮತ್ತಾಯ ಹಾಗೂ ಮಾರ್ಕನ ಕಥನಗಳಲ್ಲಿ “*ಆತನು* ಹತ್ತರದಲ್ಲಿದ್ದಾನೆ ಎಂದು ತಿಳಿದುಕೊಳ್ಳಿರಿ” ಎಂದಿರುತ್ತದೆ (ಮತ್ತಾಯ 24:33; ಮಾರ್ಕ 13:29; ಒತ್ತಿ ಹೇಳಿದ್ದು ನನ್ನದು) – ಅಂದರೆ, ಕರ್ತನು ನ್ಯಾಯತೀರ್ಪಿನೊಂದಿಗೆ ಯೆರೂಸಲೇಮಿನ ಮೇಲೆ “ಬರುವವನು” ಆಗಿದ್ದನು. ಲೂಕನ ಕಥನದಲ್ಲಿ “*ದೇವರ ರಾಜ್ಯ*ವು ಹತ್ತಿರವದೆ ಎಂದು ತಿಳುಕೊಳ್ಳಿರಿ” ಎಂದಿರುತ್ತದೆ (ಲೂಕ 21:31; ಒತ್ತಿ ಹೇಳಿದ್ದು ನನ್ನದು). ಹೊಸ ಒಡಂಬಡಿಕೆಯಲ್ಲಿ “ರಾಜ್ಯ” ಎಂಬುದರ ಅತ್ಯಂಥ ಸಾಮಾನ್ಯ ಬಳಕೆಗಳೆಂದರೆ ಅದು ಸಭೆ ಹಾಗೂ ಪರಲೋಕ ಇವೆರಡನ್ನು ಸೂಚಿಸುವದಕ್ಕೆ ಬಳಸಲಾಗಿರುತ್ತದೆ. ಯೆರೂಸಲೇಮಿನ ನಾಶನದ ವೇಳೆ, ಸಭೆಯು ಹೆಚ್ಚುಕಡಿಮೆ ನಾಲ್ವತ್ತು ವರ್ಷಗಳಿಂದಲೂ ಅಸ್ತಿತ್ವದಲ್ಲಿತ್ತು, ಆದ್ದರಿಂದ ಉಲ್ಲೇಖವು ಸಭೆಯ ಕುರಿತಾಗಿರುವದಿಲ್ಲ. ಇನ್ನೊಂದೆಡೆಯಲ್ಲಿ, ಒಬ್ಬನು ಪದವನ್ನು “ಪರಲೋಕ” ಎಂದು ಅರ್ಥನಿರೂಪಣೆ ಮಾಡುವದಾದರೆ – ಪದಗುಚ್ಛವು ಲೋಕಾಂತ್ಯವನ್ನು ಸೂಚಿಸುವಂತೆ ಮಾಡುವದಾದರೆ – ಮುಂದಿನ ವಚನದಲ್ಲಿ ಒಂದು ಸಮಸ್ಯೆಯಿರುತ್ತದೆ. ಆ ವಚನವು “ಎಲ್ಲಾ ಆಗುವ ತನಕ ಈ ಸಂತತಿಯು ಅಳಿದುಹೋಗುವದೇ ಇಲ್ಲ” (ಲೂಕ 21:32). ಬಹುಶಃ “ರಾಜ್ಯ” ಎಂಬುದನ್ನು ಅದರ ಮೂಲಭೂತ ಅರ್ಥದಲ್ಲಿ ತೆಗೆದುಕೊಳ್ಳುವದೇ ಅತ್ಯಂಥ ಉತ್ತಮ ಪರಿಹಾರ ಆಗಿರಬಹುದಾಗಿದೆ: “ವ್ಯಕ್ತಿಗಳ ಹೃದಯಗಳಲ್ಲಿ ದೇವರ ಆಳ್ವಿಕೆ.” ಬಳಿಕ ಆ ವಚನವು ಸುವಾರ್ತೆಯ ಹರಡುವಿಕೆ ಮತ್ತು ಅದು ಜನರನ್ನು ಹೇಗೆ ದೇವರ ರಾಜ್ಯದ ಪ್ರಜೆಗಳನ್ನಾಗಿ ಮಾಡಿತು ಎಂಬುದರೊಂದಿಗೆ ಸಂಬಂಧಗೊಳಿಸಬಹುದಾಗಿದೆ (ಕೊಲೊಸ್ಸೆ 1:13).

ಅದು ನಮ್ಮನ್ನು ಈ ಮುಖ್ಯವಾದ ವಾಕ್ಯಭಾಗದ ಬಳಿಗೆ ಕರೆದುಕೊಂಡು ಬರುತ್ತದೆ: "ಇದೆಲ್ಲಾ ಆಗುವ ತನಕ ಈ ಸಂತತಿಯು ಅಳಿದುಹೋಗುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಮತ್ತಾಯ 24:34; ನೋಡಿರಿ ಮಾರ್ಕ 13:30; ಲೂಕ 21:32). "ಇದೆಲ್ಲಾ" ಎಂಬುದು ಮುಂಚೆಯ ವಚನದಲ್ಲಿ ಹೊಂದಿದ್ದ ಅರ್ಥವನ್ನೇ ಇಲ್ಲಿಯೂ ಹೊಂದಿರುತ್ತದೆ (ಮತ್ತಾಯ 24:33): ಯೇಸುವು ರೋಮನ್ ಸೈನ್ಯವು ಯೆರೂಸಲೇಮನ್ನು ಮುತ್ತಿಗೆ ಹಾಕಿ ಅದನ್ನು ನಾಶಗೊಳಿಸಲ್ಪಡುವದರ ಮೇಲೆ ಒತ್ತು ಕೊಟ್ಟು ಚರ್ಚಿಸುತ್ತಿರುವದೆಲ್ಲವೂ ಆಗಿರುತ್ತದೆ.

ಈ ಅಧ್ಯಾಯದೊಳಗೆ ಈ ಮುಂಚೆ "ಸಂತತಿ" ಎಂದು ಅನುವಾದಿಸಲ್ಪಟ್ಟಿರುವ ಗ್ರೀಕ್ ಪದವು ಮೂಲಭೂತವಾಗಿ ಒಂದು ನಿರ್ದಿಷ್ಟವಾದ ಕಾಲಾವದಿಯಲ್ಲಿ ಬದುಕಿದ್ದವರನ್ನು ಸೂಚಿಸುತ್ತದೆಂಬುದಾಗಿ ಒತ್ತಿ ಹೇಳಿದೆವು. ಮತ್ತಾಯನು "ಸಂತತಿ" ಎಂಬ ಮಾತನ್ನು ಹದಿಮೂರು ಸಾರಿ ಬಳಸಿದನು (ಮತ್ತಾಯ 1:17; 11:16; 12:39, 41, 42, 45; 16:4; 17:17; 23:36; 24:34); ಪ್ರತಿ ಸಾರಿಯೂ ಅದು ಒಬ್ಬ ವ್ಯಕ್ತಿಯ ಜೀವಿತಾವದಿಯೆಂಬ ಅರ್ಥದಲ್ಲಿ ಬಳಸಲ್ಪಟ್ಟಿದೆ. ಅಪೊಸ್ತಲನು "ಈ" ಎಂಬುದನ್ನು "ಸಂತತಿ" ಎಂಬುದರೊಂದಿಗೆ ಬಳಸಿದ ವೇಳೆ, ಆತನು ಅವರನ್ನು ಮಾತಾಡುತ್ತಿರುವವನ ಸಮಕಾಲಿನರೆಂಬದಾಗಿ ಸೂಚಿಸಿ ಹೇಳಿದನು (ನೋಡಿರಿ ಮತ್ತಾಯ 11:16; 12:41, 42).[17] ಯೆರೂಸಲೇಮ್ ಪಟ್ಟಣವು ಕ್ರಿ.ಶ. 70ರಲ್ಲಿ ನಾಶಗೊಳಿಸಲ್ಪಟ್ಟಿತ್ತು, ಯೇಸುವು ಈ ಮಾತುಗಳನ್ನು ಹೇಳಿ ನಾಲ್ವತ್ತು ಕಡಿಮೆ ವರ್ಷಗಳಿಗೂ ಕಡಿಮೆ ಕಾಲದಲ್ಲಿ ಸಂಭವಿಸಿತ್ತು; ಅದು ಕ್ರಿಸ್ತನು ಯಾರೊಂದಿಗೆ ಮಾತಾಡಿದ್ದನೋ ಆ ಜನರ ಜೀವಿತ ಕಾಲದಲ್ಲಿಯೇ *ಆಗಿತ್ತು*.

ಯೇಸುವು ಯೆರೂಸಲೇಮಿನ ನಾಶನದ ಕುರಿತಾಗಿ ಮುಂತಿಳಿಸಿದ್ದು ನಿಶ್ಚಯವಾಗಿತ್ತೋ? ಆತನು ಹೀಗೆ ಹೇಳಿದನು, "ಭೂಮ್ಯಾಕಾಶಗಳು ಅಳಿದುಹೋಗುವವು, ಆದರೆ ನನ್ನ ಮಾತುಗಳು ಅಳಿದು ಹೋಗುವದೇ ಇಲ್ಲ" (ಮತ್ತಾಯ 24:35; ನೋಡಿರಿ ಮಾರ್ಕ 13:31; ಲೂಕ 21:33). ನಾವು ನೋಡಿರುವ ಪ್ರಕಾರ, ಕ್ರಿಸ್ತನ ಮಾತುಗಳು ಆತನು ಮುಂತಿಳಿಸಿದ್ದ ಪ್ರಕಾರವೇ ನಿಖರವಾಗಿ ನೆರವೇರಿದವು.

## ಎರಡನೆಯ ಬರೋಣ (ಮತ್ತಾಯ 24:36-41; ಮಾರ್ಕ 13:32-37)

ಮತ್ತಾಯ 24:36ರಲ್ಲಿ ಆರಂಭಿಸಿ, ಯೇಸುವು ಒಂದು ಬೇರೆ ವಿಷಯಕ್ಕೆ ಬರುತ್ತಾನೆ. ಇದು ಹೀಗೆಯೇ ಇರುತ್ತದೆಂಬುದನ್ನು ಹಲವಾರು ಕಾರಣಾಂಶಗಳು ಸೂಚಿಸುತ್ತವೆ: (1) ಆತನು ಹೊಸ ವಿಷಯವನ್ನು ವಿರುದ್ಧಾರ್ಥಕ ಸಂಬಂಧಾವ್ಯಯವಾದ "ಇದಲ್ಲದೆ" (δέ, *de*) ಎಂಬುದರೊಂದಿಗೆ ಪರಿಚಯಿಸುತ್ತಾನೆ: "*ಇದಲ್ಲದೆ* ಆ ದಿನದ ವಿಷಯವೂ ಆ ಗಳಿಗೆಯ ವಿಷಯವೂ ..." (ಮತ್ತಾಯ 24:36; ಒತ್ತಿ ಹೇಳಿದ್ದು ನನ್ನದು; ನೋಡಿರಿ ಮಾರ್ಕ 13:32). (2) ಬಹುವಚನದ "ಆ ದಿನಗಳನ್ನು" (ಮತ್ತಾಯ 24:22, 29; ನೋಡಿರಿ ಮಾರ್ಕ 13:20, 24) ಮತ್ತು ಏಕವಚನದ "ಆ ದಿನ" (ಮತ್ತಾಯ 24:36; ನೋಡಿರಿ ಮಾರ್ಕ 13:32) ನಡುವೆ ಒಂದು ವಿರುದ್ಧ ಹೋಲಿಕೆಯಿರುತ್ತದೆ. "ಆ ದಿನ" ಎಂಬುದನ್ನು ಮತ್ತಾಯನು ಬೇರೊಂದು ಕಡೆಯಲ್ಲಿ ನ್ಯಾಯತೀರ್ಪಿನ ದಿನವನ್ನು ಸೂಚಿಸುವದಕ್ಕೆ ಬಳಸಿರುತ್ತಾನೆ (ಮತ್ತಾಯ 7:22). (3) ಮತ್ತಾಯ 24:36ರ ಮುಂಚೆ ಮತ್ತು ನಂತರದ ಚರ್ಚೆಯಲ್ಲಿ ಅನೇಕ ವಿರುದ್ಧ ಹೋಲಿಕೆಗಳು ಕಂಡು ಬರುತ್ತವೆ. (*ದೇವಾಲಯದಿಂದ ನಿರ್ಗಮನ, ಗಂಭೀರವಾದ ವಿವಾದ* ಎಂಬ ಹೆಸರಿನ ಅಡಿಯಲ್ಲಿರುವ ನಕ್ಷೆಯನ್ನು ನೋಡಿರಿ.) ಉದಾಹರಣೆಗೆ, ಅಧ್ಯಾಯದ ಆರಂಭಿಕ ಭಾಗದಲ್ಲಿ, ಆತನು ಅವರಿಗೆ ಯೆರೂಸಲೇಮ್ ಪಟ್ಟಣವು ಇನ್ನೇನು ನಾಶಗೊಳಿಸಲ್ಪಡುತ್ತದೆಂಬುದನ್ನು

ತಿಳಿದುಕೊಳ್ಳುವಂತೆ ಒಂದು "ಗುರುತು" ಕೊಟ್ಟನು. ಆ "ಗುರುತು" ಯಾವದೆಂದರೆ ರೋಮನ್ ಸೈನ್ಯವು ಪಟ್ಟಣಕ್ಕೆ ಮುತ್ತಿಗೆ ಹಾಕಿರುವದೇ (ಲೂಕ 21:20). ಮತ್ತಾಯ 24:36ರ ಬಳಿಕ, ಆತನು ಯಾವ ಮುನ್ನೆಚ್ಚರಿಕೆಯನ್ನೂ ಹೊಂದಿರದ ಒಂದು ಘಟನೆಯ ಕುರಿತಾಗಿ ಚರ್ಚೆಯನ್ನು ಆರಂಭಿಸುವವನಾಗಿದ್ದನು. ಆ ಘಟನೆಯು ಎರಡನೆಯ ಬರೋಣವೇ. (4) ಮತ್ತಾಯ 24:36ನೇ ವಚನವು ಒಂದು ವಿಚಾರಧಾರೆಯನ್ನು ಪರಿಚಯಿಸುವದಾಗಿದ್ದು ಅದರ ಪುರುಷರು ಹಾಗೂ ಸ್ತ್ರೀಯರು ಪರಲೋಕ ಅಥವಾ ನರಕಕ್ಕೆ ಕಳುಹಿಸಲ್ಪಡುವದರೊಂದಿಗೆ ಮುಕ್ತಾಯಗೊಳ್ಳುತ್ತದೆ (ಮತ್ತಾಯ 25:46). ಅದು ಯೆರೂಸಲೇಮ್ ಪಟ್ಟಣವು ನಾಶಗೊಳಿಸಲ್ಪಟ್ಟ ವೇಳೆಯಂತೂ ಸಂಭವಿಸ*ಲಿಲ್ಲ*.

ಕರ್ತನು ಅಂತಿಮವಾಗಿ ತನ್ನ ಎರಡನೆಯ ಬರೋಣದ ಕುರಿತು ಮಾತಾಡುವದಕ್ಕೆ ಸಿದ್ಧನಾಗಿದ್ದನು. ಆತನು ಮತ್ತಾಯ 24:3ರಲ್ಲಿ ಕಂಡು ಬರುವ ಎರಡನೆಯ ಜೋಡಿಯ ಪ್ರಶ್ನೆಗಳನ್ನು ಉತ್ತರಿಸಲು ಸಿದ್ಧನಾಗಿದ್ದನು: "ನೀನು ಪ್ರತ್ಯಕ್ಷನಾಗುವದಕ್ಕೂ ಯುಗದ ಸಮಾಪ್ತಿಗೂ ಸೂಚನೆಯೇನು?"

## "ಇದಲ್ಲದೆ ಆ ದಿನದ ವಿಷಯವೂ ಆ ಗಳಿಗೆಯ ವಿಷಯವೂ" (ಮತ್ತಾಯ 24:36-41; ಮಾರ್ಕ 13:32)

ಶಿಷ್ಯರು ಆತನ ಪ್ರತ್ಯಕ್ಷತೆಯ ಮತ್ತು ಯುಗದ ಸಮಾಪ್ತಿಯ "ಸೂಚನೆ" ಏನು ಎಂದು ಕೇಳಿದ್ದು, ಆದರೆ ತನ್ನ ಬರೋಣಕ್ಕೆ ಯಾವ ಸೂಚನೆಯೂ ಇರುವದಿ*ಲ್ಲ* ಎಂಬುದನ್ನು ಒತ್ತಿ ಹೇಳಿದನು: "ಇದಲ್ಲದೆ ಆ ದಿನದ ವಿಷಯವೂ ಆ ಗಳಿಗೆಯ ವಿಷಯವೂ ನನ್ನ ತಂದೆಯೊಬ್ಬನಿಗೆ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು, ಮಗನಿಗೂ ತಿಳಿಯದು" (ಮತ್ತಾಯ 24:36; ನೋಡಿರಿ ಮಾರ್ಕ 13:32).

> ... ಕ್ರಿಸ್ತನು ... ಒತ್ತು ಕೊಟ್ಟು ಹೇಳುವದೇನೆಂದರೆ ತಾನು ಯಾವಾಗ ಬರುವನೆಂಬುದು ಆತನಿಗೆ ಗೊತ್ತಿಲ್ಲ ಎಂಬದೆ. ಆತನಿಗೆ ಗೊತ್ತೇ ಇಲ್ಲವಾದಲ್ಲಿ, ಆತನು ಹೇಗೆ ಸೂಚನೆಗಳನ್ನು ತಿಳಿಸುವದಕ್ಕೆ ಸಾಧ್ಯ? ಭಾವಾನುವಾದದ ಶೈಲಿಯಲ್ಲಿ, ಯೇಸುವು ತನ್ನ ಶಿಷ್ಯರಿಗೆ ಹೇಳುತ್ತಿರುವದೇನೆಂದರೆ, "ಹೌದು ಯೆರೂಸಲೇಮಿನ ಮತ್ತು ದೇವಾಲಯದ ನಾಶನದ ಕಡೆಗೆ ತೋರಿಸುವ ಕೆಲವೊಂದು ಸೂಚನೆಗಳಿರುತ್ತವೆ ... ನನ್ನ ಎರಡನೆಯ ಬರೋಣದ ವಿಷಯವಾದ ಸೂಚನೆಗಳಿಗೆ ಸಂಬಂಧಪಟ್ಟಂತೆ, ನಾನು ಮೇಘಗಳ ಮೇಲೆ ಪ್ರಭಾವ ಹಾಗೂ ಶಕ್ತಿಯೊಡನೆ ಇಳಿದು ಬರುವೆನೆಂಬುದನ್ನು ಬಿಟ್ಟರೆ ಬೇರೆ ಏನೂ ನನಗೆ ತಿಳಿಯದು ... ನಾನು ನಿಮಗೆ ಯಾವದೇ ನಿರ್ದಿಷ್ಟವಾದ ಸೂಚನೆಗಳನ್ನು ತಿಳಿಸಲು ಸಾಧ್ಯವಿಲ್ಲ ಯಾಕೆಂದರೆ ನನಗೆ ಒಂದೂ ಗೊತ್ತಿಲ್ಲ."[18]

ಯೇಸುವಿನ ಎರಡನೆಯ ಬರೋಣಕ್ಕೆ ಯಾವದೇ ಮುನ್ನೆಚ್ಚರಿಕೆ ಇರುವದಿಲ್ಲವಾದ್ದರಿಂದ, ನೋಹನ ದಿನಗಳಲ್ಲಿ ಪ್ರಳಯವು ಅನೇಕರು ಸಿದ್ಧವಾಗಿಲ್ಲದ ವೇಳೆಯಲ್ಲಿ ಬಂದ ಹಾಗೆಯೇ, ಆತನ ಪುನರಾಗಮನವು ಬಹಳಷ್ಟು ಮಂದಿಯು ಸಿದ್ಧರಾಗಿಲ್ಲದ ವೇಳೆಯಲ್ಲಿಯೇ ಸಂಭವಿಸುವದು: "ಹೇಗಂದರೆ ಜಲಪ್ರಳಯಕ್ಕೆ ಮುಂಚಿನ ದಿನಗಳಲ್ಲಿ ನೋಹನು ನಾವೆಯಲ್ಲಿ ಸೇರಿದ ದಿನದ ತನಕ ಜನರು ಉಣ್ಣುತ್ತಾ ಕುಡಿಯುತ್ತಾ ಮದುವೆಮಾಡಿಕೊಳ್ಳುತ್ತಾ ಮಾಡಿಕೊಡುತ್ತಾ ಇದ್ದರು" (ಮತ್ತಾಯ 24:38; ನೋಡಿರಿ ವಚನಗಳು 37-39). ನೋಹನು ಜನರಿಗೆ ಪ್ರಳಯವು ಬರುತ್ತಿದೆ ಎಂದು ಹೇಳಿದನು, ಆದರೆ ಅವರು ಆತನ ಮಾತನ್ನು ನಂಬಲಿಲ್ಲ. ಹೀಗೆ ಅವರು ಯಥಾಃರೀತಿಯಲ್ಲಿ ತಮ್ಮ ಜೀವನಗಳನ್ನು ಮುಂದುವರೆಸಿದ್ದರು.

ಇಂದು, ಕರ್ತನು ಹಿಂದಿರುಗಿ ಬರುವನೆಂಬುದಾಗಿ ಬೈಬಲ್ ನಮಗೆ ಕಲಿಸುತ್ತದಾದರೂ, ಬಹಳಷ್ಟು ಮಂದಿ ವಾಕ್ಯವು ನೀಡುವ ಎಚ್ಚರಿಕೆಗಳನ್ನು ನಿರ್ಲಕ್ಷ್ಯ ಮಾಡುತ್ತಾರೆ.

ಕರ್ತನು ಉಣ್ಣುತ್ತಾ ಕುಡಿಯುತ್ತಾ ಮದುವೆಮಾಡಿಕೊಳ್ಳುತ್ತಾ ಎಂಬುದರ ಕುರಿತು ಮಾತಾಡಿದ ವೇಳೆ, ಆತನು ಜೀವನದ ಸಾಮಾನ್ಯ ಚಟುವಟಿಕೆಗಳನ್ನು ಮುಂದುವರೆಸುವದು ತಪ್ಪು ಎಂಬುದಾಗಿ ಆತನ ತಾತ್ಪರ್ಯವಾಗಿತ್ತೋ? ಇಲ್ಲ, *ನಾವು ಆತನ ಪುನರಾಗನಕ್ಕಾಗಿ ನಮ್ಮ ಹೃದಯ ಮತ್ತು ಜೀವಿತಗಳನ್ನು ಸಿದ್ಧಪಡಿಸಿಕೊಂಡಿರುವಷ್ಟು ಕಾಲ* ಆ ಸಂಗತಿಗಳನ್ನು ಮಾಡುವದು ಸರಿಯಾದದ್ದೂ ಸೂಕ್ತವಾದದ್ದೂ ಆಗಿರುತ್ತದೆ. ಯೇಸುವು ಸಾಮಾನ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಇಬ್ಬರು ವ್ಯಕ್ತಿಗಳ ದೃಷ್ಟಾಂತವನ್ನು ಕೊಟ್ಟನು: ಆತನ ಹಿಂದಿರುಗಿ ಬರೋಣದ ವೇಳೆ ಅವರು ಹೊಲದಲ್ಲಿ ಕೆಲಸ ಮಾಡುತ್ತಿರುವರು. ಕ್ರಿಸ್ತನು ಹೀಗೆ ಹೇಳಿದನು, "ಒಬ್ಬನು ತೆಗೆದುಕೊಳ್ಳಲ್ಪಡುವನು, ಒಬ್ಬನು ಬಿಡಲ್ಪಡುವನು" (ಮತ್ತಾಯ 24:40).

ಅನೇಕ ಸಹಸ್ರವರ್ಷಪೂರ್ವ ವಾದಿಗಳು ಮತ್ತಾಯ 24:40, 41ನ್ನು ತಾವು ಕರೆಯುವ "ಎತ್ತಲ್ಪಡುವಿಕೆ" ಎಂಬ ಉಪದೇಶದಲ್ಲಿ ಸೇರ್ಪಡೆಗೊಳಿಸಿಕೊಳ್ಳುತ್ತಾರೆ: ಅವರು ಕಲಿಸುವದೇನೆಂದರೆ, ಕ್ರಿಸ್ತನು ಹಿಂದಿರುಗಿ ಬರುವ ವೇಳೆ, ಸಿದ್ಧಮಾಡಿಕೊಂಡಿರುವವರು ಮೇಘಗಳಲ್ಲಿ ಆತನೊಂದಿಗೆ "ತೆಗೆದುಕೊಳ್ಳಲ್ಪಡುವರು," ಅದೇ ವೇಳೆಯಲ್ಲಿ ಸಿದ್ಧಮಾಡಿಕೊಳ್ಳದಿರುವವರು ಭೂಮಿಯ ಮೇಲೆ ಏಳು ವರ್ಷಗಳ ಸಂಕಟಕಾಲಕ್ಕಾಗಿ ಕೈ "ಬಿಡಲ್ಪಡುವರು." ಹೇಗೂ, ಮತ್ತಾಯ 24ರ ಸನ್ನಿವೇಶದಲ್ಲಿ, "ತೆಗೆದುಕೊಳ್ಳಲ್ಪಡುವನು" ಎಂಬುದರ ಅರ್ಥವು "ಪರಲೋಕದಲ್ಲಿ ದೇವರ ಸಂಗಡ ಇರುವದಕ್ಕೆ ತೆಗೆದುಕೊಳ್ಳಲ್ಪಡುವನು" ಎಂದಾದರೆ (ನೋಡಿರಿ ಅಪೊಸ್ತಲರ ಕೃತ್ಯಗಳು 1:2, 11) "ಬಿಡಲ್ಪಡುವನು" ಎಂಬುದರ ಅರ್ಥವು ದೇವರಿಂದ ಅಗಲಿಸಲ್ಪಟ್ಟು ನರಕದಲ್ಲಿ ನಿತ್ಯಕಾಲಕ್ಕೂ ಇರಲ್ಪಡುವದು ಎಂದಾಗಿದೆ (2 ಥೆಸಲೋನಿಕ 1:7-9).

ಹೊಲದಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಆ ದಿನದಲ್ಲಿನ ಪುರುಷರಿಗೆ ಅತ್ಯಂಥ ಸಾಮಾನ್ಯವಾಗಿರುತ್ತಿದ್ದ ಕೆಲಸದಲ್ಲಿ ನಿರತರಾಗಿದ್ದರು, ಆದರೆ ಅವರಲ್ಲೊಬ್ಬನು ಕರ್ತನ ಬರೋಣಕ್ಕಾಗಿ ಸಿದ್ಧಗೊಂಡಿದ್ದರೆ ಮತ್ತೊಬ್ಬನು ಸಿದ್ಧನಾಗಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಕ್ರಿಸ್ತನು ಅದೇ ರೀತಿಯಲ್ಲಿ ಬೀಸುವ ಕಲ್ಲನ್ನು ಬೀಸುತ್ತಿರುವ ದೃಷ್ಟಾಂತವನ್ನು ಬಳಸಿದನು, ಆ ಸಮಯದಲ್ಲಿ ಸ್ತ್ರೀಯರು ನಿರತರಾಗಿರುತ್ತಿದ್ದ ಚಟುವಟಿಕೆಗಳಲ್ಲೊಂದಾಗಿದೆ (ಮತ್ತಾಯ 24:41).

### "ಎಚ್ಚರವಾಗಿರ್ರಿ" (ಮತ್ತಾಯ 24:42-51; ಮಾರ್ಕ 13:33-37)

ಮತ್ತಾಯ 24:42-51ರಲ್ಲಿ, ಕೊನೆಗೂ ನಾವು ನಮಗಾಗಿ ದೇವರು ಈ ಅಧ್ಯಾಯವನ್ನು ಸಂರಕ್ಷಿಸಿಟ್ಟಿದ್ದರ ಪ್ರಾಥಮಿಕ ಕಾರಣದ ಬಳಿಗೆ ಬಂದಿರುತ್ತೇವೆ: ನಮಗೆ ಈ ಸಂದೇಶದ *ಅಗತ್ಯವಿದೆ.* ಯೇಸುವು ಯಾವಾಗ ಹಿಂದಿರುಗಿ ಬರುವನೆಂಬುದು ನಮಗೆ ಗೊತ್ತಿಲ್ಲವಾದ್ದರಿಂದ, ನಾವು ಯಾವಾಗಲೂ *ಸಿದ್ಧರಾಗಿ* ಇರುವದರ ಅಗತ್ಯವಿದೆ: "ಹೀಗಿರಲಾಗಿ ನಿಮ್ಮ ಕರ್ತನು ಬರುವ ದಿನವು ನಿಮಗೆ ಗೊತ್ತಿಲ್ಲವಾದದರಿಂದ ಎಚ್ಚರವಾಗಿರ್ರಿ" (ಮತ್ತಾಯ 24:42; ನೋಡಿರಿ ಮಾರ್ಕ 13:33).

ಕ್ರಿಸ್ತನ ಬರೋಣವು ರಾತ್ರಿ ವೇಳೆಯಲ್ಲಿ ಬರುವ ಕಳ್ಳನಂತಿರುತ್ತದೆ, ಆ ಕಳ್ಳನು ನಿರೀಕ್ಷೆಯನ್ನೇ ಮಾಡಿರದ ವೇಳೆಯಲ್ಲಿ ಬರುವ ದರೋಡೆಗಾರನಾಗಿದ್ದಾನೆ (ಮತ್ತಾಯ 24:43, 44; ನೋಡಿರಿ 1 ಥೆಸಲೋನಿಕ 5:2; 2 ಪೇತ್ರ 3:10). ಕರ್ತನ ಬರೋಣಕ್ಕೆ ಸಮಯವನ್ನು ನಿಗದಿ ಮಾಡುವದಕ್ಕೆ ಪ್ರಯತ್ನಿಸುವವರು ಮತ್ತಾಯ 24:44ನೇ ವಚನವನ್ನು ಹೃದಯಕ್ಕೆ ತಂದುಕೊಳ್ಳಬೇಕು. ಅವರು "ಕಾಲದ ಸೂಚನೆಗಳನ್ನು" ನೋಡಿ ಬಿಟ್ಟು ಆತನ ಬರೋಣವು

ಸಮೀಪವಾಗಿದೆ ಎಂಬುದಾಗಿ ಮುಂತಿಳಿಸಬಲ್ಲರು ಎಂಬುದಾಗಿ *ಭಾವಿಸಿಕೊಳ್ಳುತ್ತಾರೆ*, ಆದರೆ ಆತನು "ನೀವು *ನೆನಸದ* ಗಳಿಗೆಯಲ್ಲಿ ... ಬರುತ್ತಾನೆ"! (ಎಂದು ಹೇಳಿದನು ಒತ್ತಿ ಹೇಳಿದ್ದು ನನ್ನದು.)

ಪುನಃ, ಆತನ ಬರೋಣವು ನೆನಸದ ಗಳಿಗೆ ಹಿಂದಿರುಗಿ ಬಂದ ಯಜಮಾನನು ತನ್ನ ಆಳು ಅಪನಂಬಿಗಸ್ತನಾಗಿದ್ದಾನೆಂಬುದನ್ನು ಕಂಡುಕೊಂಡ ರೀತಿಯಲ್ಲಿ ಅನಿರೀಕ್ಷಿತವಾಗಿರುತ್ತದೆ (ಮತ್ತಾಯ 24:45-51; ನೋಡಿರಿ ಮಾರ್ಕ 13:34). ದೇವರ ಪ್ರತಿಯೊಬ್ಬ ಸೇವಕನಿಗಾಗಿ ಇರುವ ಪಾಠವು ಇದೇ ಆಗಿದೆ:

> ಮನೇಯಜಮಾನನು ಸಂಜೆಯಲ್ಲೋ ಸರುಹೊತ್ತಿನಲ್ಲೋ ಕೋಳಿ ಕೂಗುವಾಗಲೋ ಮುಂಜಾನೆಯಲ್ಲೋ ಯಾವಾಗ ಬರುತ್ತಾನೋ ನಿಮಗೆ ಗೊತ್ತಿಲ್ಲದ ಕಾರಣ ಎಚ್ಚರವಾಗಿರಿ; ಅವನು ಏಕಾಏಕಿ ಬಂದು ನೀವು ನಿದ್ದೆ ಮಾಡುವದನ್ನು ಕಂಡಾನು. ನಾನು ನಿಮಗೆ ಹೇಳಿದ್ದನ್ನು ಎಲ್ಲರಿಗೂ ಹೇಳುತ್ತೇನೆ, ಎಚ್ಚರವಾಗಿರಿ ಅಂದನು (ಮಾರ್ಕ 13:35-37).

ಮುಂದಿನ ಅಧ್ಯಾಯವಾದ, ಮತ್ತಾಯ 25ರಲ್ಲಿ, ಯೇಸುವು ಸಿದ್ಧವಾಗಿರುವದರ ಅಗತ್ಯತೆಯ ಕುರಿತು ಒತ್ತಿ ಹೇಳುವದನ್ನು ಮುಂದುವರೆಸಿದನು: ಹತ್ತು ಮಂದಿ ಕನ್ಯೆಯರ ಸಾಮ್ಯದಲ್ಲಿ, ಐದು ಮಂದಿ ಮದಲಿಂಗನು ಹಿಂದಿರುಗಿ ಬಂದ ವೇಳೆ ಸಿದ್ಧರಾಗಿದ್ದರು, ಆದರೆ ಉಳಿದ ಐದು ಮಂದಿ ಸಿದ್ಧರಾಗಿರಲಿಲ್ಲ (ಮತ್ತಾಯ 25:1-13). ಹತ್ತು ತಲಾಂತುಗಳ ಸಾಮ್ಯದಲ್ಲಿ, ನಮ್ಮಲ್ಲಿ ಪ್ರತಿಯೊಬ್ಬರೂ ನಮ್ಮ ಮನೆವಾರ್ತೆತನದ ವಿಷಯದಲ್ಲಿ ಲೆಕ್ಕವನ್ನು ಒಪ್ಪಿಸಬೇಕಾಗಿರುತ್ತದೆಂಬುದನ್ನು ಕ್ರಿಸ್ತನು ಕಲಿಸಿದನು (ಮತ್ತಾಯ 25:14-30). ಅಧ್ಯಾಯವು ಕರ್ತನು ಹಿಂದಿರುಗಿ ಬಂದ ವೇಳೆ ಸಂಭವಿಸುವ ನ್ಯಾಯತೀರ್ಪಿನ ಬಣ್ಣನೆಯೊಂದನ್ನು ಮಾಡುವ ಮೂಲಕ ಅಂತ್ಯಗೊಳ್ಳುತ್ತದೆ (ಮತ್ತಾಯ 25:31-46).

## ಮುಕ್ತಾಯ

ಮತ್ತಾಯ 24ನೇ ಅಧ್ಯಾಯವನ್ನು ಅವಲೋಕಿಸುವ ವೇಳೆ, ನಾವು ಈ ಜಟಿಲಗೊಳಿಸುವಂಥ ಅಧ್ಯಾಯದ ಕುರಿತು ಕೇಳಬಹುದಾದ ಪ್ರತಿಯೊಂದು ಪ್ರಶ್ನೆಗೂ ನಾವು ಉತ್ತರವನ್ನು ಕೊಟ್ಟಿದ್ದೇವೋ? ಇಲ್ಲ, ಆದರೆ ಅಧ್ಯಯನವನ್ನು ಮುಂದುವರೆಸುವ ವೇಳೆ ಜನರು ಅತಿರೇಕದಿಂದ ಮತ್ತು ಸಂವೇದನಾಶೀಲತೆಯಿಂದ ದೂರವಿರುವ ಹಾಗೆ ಅವರಿಗೆ ಸಹಾಯ ಮಾಡಬಲ್ಲ ಕೆಲವು ಯೋಚನೆಗಳನ್ನು ತಿಳಿಸಿದ್ದೇವೆ. ಮತ್ತಾಯ 24ನೇ ಅಧ್ಯಾಯವನ್ನು ತಮ್ಮ ಜೀವಿತಕಾಲವೆಲ್ಲಾ ಅಧ್ಯಯನ ಮಾಡುವವರಿಗೂ ಬಹುಶಃ ಈ ಕಷ್ಟಕರ ವಾಕ್ಯಭಾಗದ ವಿಷಯದಲ್ಲಿ ಈಗಲೂ ಪ್ರಶ್ನೆಗಳಿರಬಹುದಾಗಿದೆ.

ಹಾಗಾದರೆ ಈ ಅಧ್ಯಾಯದಿಂದ ನಾವು ಏನನ್ನೂ ಕಲಿಯಲು ಸಾಧ್ಯವಿಲ್ಲ ಎಂದರ್ಥವೋ? ಪುನಃ, ಉತ್ತರವು ಘಂಟಾಘೋಷವಾಗಿ "ಇಲ್ಲ" ಎಂದಾಗಿರುತ್ತದೆ. A. T. Robertsonನು ಅಭಿಪ್ರಾಯ ಪಟ್ಟಿದ್ದೇನೆಂದರೆ ನಾವು "ಕಾಲ ಮತ್ತು ಸ್ಥಳದ ಕುರಿತಾದ ಕೂಲಂಕುಶವಾದ ವಿವರಗಳನ್ನು ಅವುಗಳ ಪಾಡಿಗೆ ಬಿಟ್ಟರೂ," ಆಗಲೂ ನಾವು "ಉಪದೇಶದ ಸಾಮಾನ್ಯ ಮಂದಪ್ರವಾಹವನ್ನು ಪಡೆದುಕೊಳ್ಳಬಲ್ಲೆವು."[19]

ಮತ್ತಾಯ 24ನೇ ಅಧ್ಯಾಯದಿಂದ ನಾವು ಯಾವ ಪಾಠಗಳನ್ನು ಕಲಿತುಕೊಳ್ಳಬಹುದು? ಅಧ್ಯಾಯದಲ್ಲಿ ಯೆರೂಸಲೇಮಿನ ನಾಶನದ ಸುತ್ತ ಕೇಂದ್ರಿಕೃತವಾದ ಭಾಗವೊಂದು ನಮಗೆ ಮೂರು ಶ್ರೇಷ್ಠ ಸತ್ಯಗಳನ್ನು ತಿಳಿಸುತ್ತದೆ: (1) ದೇವರ ನ್ಯಾಯತೀರ್ಪಿನಿಂದ ಯಾವನೂ ಹೊರತಾಗಿರುವದಿಲ್ಲ. (2) ದೇವರು ಏನನ್ನಾದರೂ ಹೇಳಿದರೆ, ಆತನು ಅದನ್ನು ಮಾಡುವನು.

(3) ಯೇಸುವು ತನ್ನನ್ನು ಯಾರೆಂದು ಹೇಳಿಕೊಂಡನೋ ಅದೆಲ್ಲವೂ ಆಗಿರುವನು ಯಾಕೆಂದರೆ ನಾಶನದ ಕುರಿತಾಗಿ ಆತನು ಹೇಳಿದ ಪ್ರವಾದನೆಗಳು ಅಷ್ಟೊಂದು ವಿವರವಾಗಿ ನೆರವೇರಿದ್ದವು. ಆದ್ದರಿಂದ ಆತನು ತನ್ನ ಪ್ರೇರಿತ ಲೇಖಕರ ಮೂಲಕ ಹೇಳುವದನ್ನೆಲ್ಲಾ ಕಿವಿಗೊಟ್ಟು ಕೇಳೋಣ.

ನಾವು ಅಧ್ಯಾಯದಲ್ಲಿ ಎರಡನೆಯ ಬರೋಣದ ಕುರಿತಾಗಿ ಒತ್ತಿ ಹೇಳುವ ಭಾಗದಿಂದ ಪಾಠಗಳನ್ನು ಕಲಿತುಕೊಳ್ಳಬಹುದು: (1) ಕ್ರಿಸ್ತನು ಹಿಂದಿರುಗಿ ಬರುತ್ತಿದ್ದಾನೆ! (2) ಆತನು ಯಾವದೇ ಗಳಿಗೆಯಲ್ಲಾದರೂ ಬರಬಲ್ಲನು. (3) ಗಳಿಯು ಯಾರಿಗೂ ಗೊತ್ತಿರುವದಿಲ್ಲ. (4) ಆತನು ನಮಗೆ "ಆಗ ಅರಸನು ತನ್ನ ಬಲಗಡೆಯಲ್ಲಿರುವವರಿಗೆ - ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ" (ಮತ್ತಾಯ 25:34) ಎಂದು ಹೇಳುವದನ್ನು ಕೇಳಿಸಿಕೊಳ್ಳುವವರಾಗುವ ಹಾಗೆ, ನಾವು ಯಾವಾಗಲೂ ಸಿದ್ಧರಾಗಿರುವ ಅಗತ್ಯವಿದೆ.

---

## ಅಡಿಟಿಪ್ಪಣಿಗಳು

[1]Josephus *Antiquities* 15.11.3; *Wars* 5.5.4. [2]Josephus *Antiquities* 15.11.3. ಈ ಅಳತೆಯು ಹದಿನೆಂಟು ಇಂಚುಗಳ ಒಂದು ಚಿಕ್ಕದಾದ ಮೊಳವನ್ನು ಅಳವಡಿಸಿಕೊಳ್ಳುತ್ತದೆ. *Wars* 5.5.6ವು ಕಲ್ಲುಗಳಿಗೆ ಬೇರೆಯಾದ ವಿಸ್ತೀರ್ಣತೆಗಳನ್ನು ನೀಡುತ್ತದೆ. [3]Robert Duncan Culver, *The Life of Christ* (Grand Rapids, Mich.: Baker Book House, 1976), 225–26. [4]Will Ed Warren, Class Syllabus, *The Life of Christ: The Synoptic Gospels*, Harding University, 1991, 96. [5]A. T. Robertson, *A Harmony of the Gospels for Students of the Life of Christ* (New York: Harper & Row, 1950), 173. [6]R. T. France, *The Gospel According to Matthew*, Tyndale New Testament Commentaries, gen. ed. Leon Morris (Grand Rapids, Mich.: Wm. B. Eerdmans Publishing Co., 1985), 346. [7]Jack P. Lewis, *The Gospel According to Matthew, Part 2*, The Living Word Commentary, ed. Everett Ferguson (Abilene, Tex.: ACU Press, 1976), 129–30. [8]Josephus *Antiquities* 20.5.1–2; 20.8.6; *Wars* 2.12.4–5. [9]See 1 Maccabees 1:54; 2 Maccabees 6:4, 5; Josephus *Antiquities* 12.5.4. [10]Wayne Jackson, "Daniel's Prophecy of the Seventy Weeks," *Truth for Today* 22 (June 2001): 23–24. See Josephus *Antiquities* 10.11.7.

[11]Josephus *Antiquities* 18.3.1; 18.5.3; *Wars* 6.6.1. [12]Neale Pryor, "The 'Abomination of Desolation' in Daniel 9:27 & Matthew 24:15–21," *Truth for Today* 22 (June 2001): 50. ನೋಡಿರಿ Eusebius *Ecclesiastical History* 3.5; Josephus *Wars* 4.9.1–2; 4.10.1–2; 4.11.4–5. [13]Josephus *Wars* 6.9.3. [14]Ibid., 5.11.1. [15]J. Norval Geldenhuys, "Luke," *The Biblical Expositor*, ed. Carl F. H. Henry (Philadelphia: Holman, 1960), 3:141. [16]Jackson, 24. [17]ನೋಡಿರಿ F. Furman Kearley, "An Exegesis of Matthew 24," *Abilene Christian University Lectures* (1980): 130. [18]Ibid., 131–32. [19]Robertson, 173.